ಅಪರಂಜಿ



ಸಂಪುಟ....೧
ಸಂಚಿಕೆ....೧೦
ಜುಲೈ....೧೯೮೪

ತಿಳಿನಗೆಯ ಕಾರಂಜಿ

ಈ ಸಂಚಿಕೆಯ ಲೇಖಕರು :

ಆನಂದ್,
ಕೇಫ,
ಬಿ. ಎಸ್. ಚಂದ್ರಶೇಖರ್,
ಚಿ. ರಾ. ಅಣ್ಣಾಜಿ,
ಶಿವಕುಮಾರ್,
ಡಾ॥ ಕೆ. ಎ. ಅಶೋಕ ಪೈ,
ಶೀಪಿ,
ದಾಶರಥಿ ದೀಕ್ಷಿತ್,
ಲೀಲಾ ಮಿರ್ಲೆ,
ಮತ್ತು ಇತರರು.

ಗೌರವ ಸಲಹೆಗಾರರು ಅ.ರಾ.ಸೇ.
ಗೌ॥ ಸಂಪಾದಕರು ಆರ್. ಶೇಷಗಿರಿರಾವ್.

ಎಚ್ ಇ ಟಿ

ಆಮದು ಬದಲು ಉತ್ಪಾದನೆಯಲ್ಲಿ

ರಾಷ್ಟ್ರೀಯ ಪ್ರಶಸ್ತಿ ವಿಜೇತರು

15 ಆಗಸ್ಟ್ 1981

ಆರ್.ಎಫ್. ಕೋ ಆಕ್ಸಿಲ್ ಕನೆಕ್ಟರ್, ಅಂತರ ರಾಷ್ಟ್ರೀಯ ಸೈನಿಕ ಸಾಮಗ್ರಿಗಳಿಗೆ ಬಿಡಿ ಭಾಗಗಳು ಮತ್ತಿತರ ಅತಿ ನಿಖರ ಉತ್ಪಾದನೆಗಳು,
ದೇಶೀಯ ತಾಂತ್ರಿಕ ನೈತೆಯಿಂದ
ಆಮದು ಸರಕುಗಳಿಗೆ ಬದಲು ಉತ್ಪಾದನೆ ನಮ್ಮ ಗುರಿ.

With Best Compliments from

ಹಿಂದೂಸ್ಥಾನ್ ಎಲೆಕ್ಟ್ರೋ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್

ಇಲೆಕ್ಟ್ರಾನಿಕ್ ಎಸ್ಟೇಟ್, ಪೀಣ್ಯ,
ಬೆಂಗಳೂರು–560 058.

ಟೆಲೆಕ್ಸ್ : 0845–8266 ಕೇಬಲ್ : ಹಿಂದೆಲೆಕ್
ಟೆಲಿಫೋನ್ : 38480, 38726.
ಕಾರ್ಖಾನೆಗಳು : ಪೀಣ್ಯ, ಬೆಂಗಳೂರು. ರಾಜಾಜಿನಗರ, ಬೆಂಗಳೂರು

ಅ ಪ ರಂ ಜಿ

ಗೌರವ ಸಲಹೆಗಾರರು

ಶ್ರೀ ಅ.ರಾ.ಸೇ.

ಶ್ರೀ ಶಿವಕುಮಾರ್

ಪ್ರಕಾಶಕರು ಮತ್ತು ಸಂಪಾದಕರು

ಶ್ರೀ ಶೇಷಗಿರಿ

ವಾರ್ಷಿಕ ಚಂದಾ : ರೂ. 25-00

ಮುದ್ರಣ

ಶ್ರೀ ವೆಂಕಟೇಶ್ವರ ಪವರ್ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್
ಪೀಣ್ಯ, ಬೆಂಗಳೂರು-58.

ಮನವಿ,

ಕೊರವಂಜಿ ಅಪರಂಜಿಯೊಡನೆ ನಾಡಿಗೆ ಬಂದಿದ್ದಾಳೆ. ಕೊರವಂಜಿ ಬಳಗದವರು, ಹೊಸ ಲೇಖಕರೊಂದಿಗೆ ನಿಮಗಾಗಿ ತಿಳಿನಗೆಯಹೊನಲನ್ನು ಹರಿಸುತ್ತಾರೆ. ಸದ್ಯಕ್ಕೆ ಚಂದಾದಾರರಿಗೆ ಮಾತ್ರ ಅಪರಂಜಿ ಲಭ್ಯ. ವಾರ್ಷಿಕ ಚಂದಾ ರೂ. 25-00 ನೀವೂ, ನಿಮ್ಮ ಮಿತ್ರರೂ ಚಂದಾದಾರರಾಗಿರಿ, ಜಾಹಿರಾತು ಕೊಡಿ. ಲೇಖಕರೂ, ವ್ಯಂಗ್ಯ ಚಿತ್ರಕಾರರೂ ತಮ್ಮ ಕೃತಿಗಳನ್ನು ಕಳಿಸಿಕೊಡಲು ಪ್ರಾರ್ಥನೆ. ಅಪರಂಜಿ ನಿಮ್ಮದು. ಅದರ ಅಭಿವೃದ್ಧಿ ನಿಮಗೆ ಸೇರಿದ್ದು. ಚಂದಾ ಹಣವನ್ನು ಮನಿಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳಿಸಿಕೊಡಿ.

ಅಪರಂಜಿ ಕಾರ್ಯಾಲಯ,
ನಂ. 36, 6ನೇ ಮುಖ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560003.

ಆರ್. ಶೇಷಗಿರಿರಾವ್
ಸಂಪಾದಕ.

ಅಪರಂಜಿ

ಸಂಪುಟ ೧ ಜುಲೈ ೧೯೮೪ ಸಂಚಿಕೆ-೧೦

ಸರ್ವಭೂತಗಳಿಗೂ ಅಂತರಾತ್ಮನಾಗಿರುವ ಒಬ್ಬನೇ ಪರಮಾತ್ಮನು ಲೋಕ ದುಃಖದಿಂದ ಲಿಪ್ತನಾಗದೆ ಆಚೆಗಿದ್ದಾನೆ.

— **ಕಠೋಪನಿಷತ್**

ರಾಷ್ಟ್ರದ ಸ್ಥಿತಿಗತಿಗಳು ಆತಂಕಕಾರಿಯಾಗಿವೆ ಎಂಬುದು ಅಪರಂಜಿಯ ಅನಿಸಿಕೆ, ಏಕೆಂದರೆ ವಿವೇಕವು ಗರಿಷ್ಟ ಪ್ರಮಾಣದಲ್ಲಿ ಆವಿಯಾಗುತ್ತಿದೆಯೋನೋ ಎಂದು ಜನತೆ ಚಿಂತಿಸುವಂತಾಗಿದೆ. ಯುದ್ಧ ವಿಷ್ಯನೆಂಬ ಮೀನಿನ ಮರಿಯಂತೆ ಭವಿಷ್ಯವನ್ನು ತಾತ್ಸಾರಮಾಡದೆ, ಪ್ರತ್ಯುತ್ಪನ್ನ ಮತಿಗಳಾಗಿ ನಾವೆಲ್ಲರೂ ವರ್ತಿಸುವುದು ಅಗತ್ಯವಾಗಿದೆ. ಆಕಾಶ ತಲೆಯಮೇಲೆ ಕಡಿದುಬಿದ್ದಿದೆಯೆಂದು ಬೆದರುವ ಅಗತ್ಯವೇನೂ ಇಲ್ಲ. ಆದರೆ ಬೆಂಕಿ ಬಿದ್ದ ಮನೆಯ ಗಳುವನ್ನು ಹಿರಿದುಕೊಳ್ಳುವವರು ಯಾರು ಎಂಬುದನ್ನು ತಪ್ಪಿಲ್ಲದೆ ಕಂಡುಹಿಡಿದುಕೊಳ್ಳಬೇಕು.

ನಾವೆಲ್ಲರೂ ಒಂದು ಎಂದು ಜಪಿಸಿದರೆ ಸಾಲದು. ಒಂದಾಗಬೇಕು. ವೈಜ್ಞಾನಿಕ ಮನೋಭಾವ ಲೆಬನಾನ್, ಖಾರೀ ಪ್ರದೇಶ, ಭಿವಂಡಿ, ಪಂಜಾಬ್‌ಗಳಲ್ಲಿ ನೆಲಸಲಿ.

ಸಂಪಾದಕ.

ಈ ಸಂಚಿಕೆಯಲ್ಲಿ

ಧಾರವಾಹಿ **"ಮಂದಾರ"** ಮುಂದಿನ ಸಂಚಿಕೆಯಲ್ಲಿ ಎದುರು ನೋಡಿ

— ಸಂಪಾದಕ.

ಅಪರಂಜಿ ಕಿಡಿ — ಆನಂದ್

1. ಏಕಕಾಲದಲ್ಲಿ ನಾಲ್ಕಾರು ಮಂದಿಯ ನಡುವೆ ಟೆಲಿಫೋನ್ ಸಂಪರ್ಕ.

—ಮದ್ರಾಸ್ ಸುದ್ದಿ.

ಇದೇನು ಮಹಾ, ಬೆಂಗಳೂರಿನಲ್ಲಿ ಇದು ದಿನನಿತ್ಯದ ವಿಷಯ !

2. ಮಂತ್ರಿಗಳು ತಮ್ಮ ಮಾತು ಮರೆತರು

—ಶೀರ್ಷಿಕೆ

ಅದೂ ಒಂದು ಸುದ್ದೀನೇ ಸ್ವಾಮಿ ?

3. ಮೈಸೂರು ಜೂನಲ್ಲಿರುವ ಗೊರಿಲ್ಲಾಗಳು ಗಂಭೀರವಾಗಿದ್ದುವಲ್ಲ, ಏಕಿರಬಹುದು ಎಂದು ಒಬ್ಬರು ಕೇಳಿದ್ದಾರೆ.

ಪ್ರೇಕ್ಷಕರ ಚೇಷ್ಟೆಗಳನ್ನು ನೋಡಿ, ನಮ್ಮ ವಂಶಸ್ಥರು ಹೀಗಾದರೇ ಅಂತ ಅವಕ್ಕೆ ಕೊರಗೇನೋ ?

4. ಭವಿಷ್ಯದಲ್ಲಿ ಪುರುಷರು ಅನಗತ್ಯ.

—ಇಂಗ್ಲೆಂಡಿನ ವಿಜ್ಞಾನಿಗಳು

ಈಗಲೂ ಸಂಬಳ ಬಂದ ಮರುದಿನ ನಮಗೂ ಹಾಗೆ ಅನ್ನಿಸುತ್ತೆ !

5. ಮೊದಲು ದೇವರನ್ನು ಪ್ರಾರ್ಥಿಸಿ, ನಂತರ ಖರೀದಿಸಿ !

—ಬಟ್ಟೆ ಜಾಹೀರಾತು

ಟೀಕೆ ಅನಗತ್ಯ !

6. ವಾಯುಶಕ್ತಿ ಸಂಶೋಧನೆಗೆ ನಗರದಲ್ಲಿ ಕೇಂದ್ರ್ರದ ಸಂಭವ

—ಸುದ್ದಿ

ಸರಿ ಸರಿ ! ಮೊದಲು ಮಾರುತಿ ! ಈಗ ಅವನ ಅಪ್ಪ !!

7. ಬೆಂಗಳೂರು ಮೇಯರ್‌ಗೆ ಮತ್ತೊಂದು ವಿದೇಶ ಪ್ರವಾಸ

—ದಿನ ಪತ್ರಿಕೆ

ಮೇಯರೇ ಎದ್ದು ಹೊಲ ಮೇಯ್ದರೆ ?

8. ಬೆಂಗಳೂರಿನಲ್ಲಿ ನೀರಿನ ಕೊರತೆಗೆ ಜನತಾ ಮಂತ್ರಿಗಳೇ ಕಾರಣ

—ಶ್ರೀ ಮೊಯ್ಲಿ

ಛೆ, ಪಾಪ! ಅವರು ಎಷ್ಟು ನೀರು ಕುಡಿದಾರು !

ಶುಭಾಶಯಗಳೊಂದಿಗೆ –



ಸಿಗ್ಮ ಇಂಜಿನಿಯರಿಂಗ್ ಕಂಪನಿ

ಬಿ–63. ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,
ಬೆಂಗಳೂರು-560 058.

****

ತಯಾರಕರು : ಇ.ಓ.ಟಿ. ಕ್ರೇನುಗಳು

ಹೆಚ್.ಓ.ಟಿ. ಕ್ರೇನ್‌ಗಳು

ಇತರ ಸಾಮಾಗ್ರಿ ನಿರ್ವಹಣ ಯಂತ್ರಗಳು

ಬೆಕ್ಕುಗಳನ್ನ ಕಂಡ್ರೆ ನಂಗಷ್ಟಕ್ಕಷ್ಟೆ. ಯುಟೇಕ್‌ದಿ ಹೈರೋಡ್ ಐಟೇಕ್ ಲೋ ರೋಡ್–ಅಂತ ಬಿಟ್ಟುಬಿಡ್ತೀನೆ ಈ ನಮ್ಮ ಅಷ್ಟಕ್ಕಷ್ಟೆ ತುಂಬಾ ದಿನದಿಂದ ಬಂದಿದ್ದು ನಿಜಹೇಳೋದಾದ್ರೆ ನನ್ನ ಮೆಟ್ರಿಕ್ ದಿನಗಳಿಂದ ಹುಟ್ಟಿ ಬೆಳೆದುಬಂದಿದ್ದು. ನಾನು ಮೆಟ್ರಿಕ್ ರಿಸಲ್ಟ್ ನೋಡಿಬಿಟ್ಟು ಹ್ಯಾಪ್‌ಮೋರೆ ಮಾಡಿಕೊಂಡು ಮನೆ ಸೇರಿದಾಗ ನನ್ನಪ್ಪ ಏನೂಹೇಳಲಿಲ್ಲ "ಸಿನಿಮಾ ನೋಡೋದೂ ಪೋಲೀ ಅಲೆಯೋದು ಬಿಟ್ಟು ಓದಿದ್ರೆ ನಿನ್ನ ಮುಖಕ್ಕೆ ಪಾಸ್ ಸಿಕ್ಕಿರೋದು-ಅಂತ ಮಾತ್ರ ಅಂದ್ರು, ಅಮ್ಮನೂ ಬಯ್ಯಲಿಲ್ಲ. ಈವರ್ಷ ದಸರಾ ದೀಪಾವಳೀಗೆ ಹೊಸಬಟ್ಟೆಬೇಕೂಂತ ಅಪ್ಪನ್ನ ಕೇಳಿ ಗೀಳೀಯೆ!–ಅಂತ ಮಾತ್ರ ಎಚ್ಚರಿಸಿದರು. ಆದರೆ ನಮ್ಮನೆ ಬೆಕ್ಕು ಟೋಬರ್ ಮರಿ-ಎರಡುತಿಂಗಳ ಹಿಂದೆ ನಾಲ್ಕು ಮರಿ ಹಾಕಿದಾಗಲೇ ಅದು ಹೆಣ್ಣುಅಂತ ಗೊತ್ತಾಗಿದ್ದು ಟೋಬರ್ ಮರಿ ಮಾತ್ರ ನನ್ನನ್ನ-ಖೊಮೇನಿ ಸಿಲ್ಕು ಸ್ಮಿತಾನ ನೋಡೋರೀತೀಲಿ ನೋಡಿತ್ತು-ಒಂದು ವೇಳೆ ಅಯಾತೊಲ್ಲಾ ಖೊಮೇನಿಗೆ ಸಿಲ್ಕ್ ಸ್ಮಿತಾನ ನೋಡೋ ಪುಣ್ಯ ಲಭಿಸಿದ್ದಿದ್ದರೆ!

ನಂಬೆಕ್ಕಿಗೆ ಟೋಬರ್ ಮರಿ ಅಂತ ಹೆಸರಿಟ್ಟಿದ್ದು ನಾನೇ ಅದೇ ಹೆಸರಿನ ಒಂದು ಬೆಕ್ಕಿಗೆ ಒಬ್ಬಾತ ಮನುಷ್ಯರ ಹಾಗೆ ಮಾತಾಡೋದು ಕಲ್ಸಿದ್ದಾಂತ ಒಂದು ಬಾರಿ ರೀಡರ್ಸ್ ಡೈಜಸ್ಟಿನಲ್ಲಿ ಓದಿದ್ದೆ. ನಮ್ಮನೇ ಬೆಕ್ಕಿಗೂ ಅದೇ ನಾಮಕರಣ ಮಾಡಿದ್ದೆ.

ನಮ್ಮನೆ ಎದುರು ಕಂಟ್ರಾಕ್ಟರ್ ನರಸಿಂಹಯ್ಯನ ಮನೆ. ಅವರ ಮಗಳು ಸುಧಾಳ ಮದುವೆ ಇನ್ನೊಂದು ವಾರದಲ್ಲಿ ನಡೆಯೋದಿತ್ತು. ಮದುವೆಗೆ ಕರೆಯೋಕೆ ಕಂಟ್ರಾಕ್ಟರ್ ಭಾಗ್ಯಲಕ್ಷ್ಮಮ್ಮ ಮಗ ಸುರೇಶನ ಜೊತೆ ಹೊರಬಂದ್ರು. ನಮ್ಮನೆ ಹಾಲಿನಲ್ಲಿ ಅಮ್ಮ ನಾನು ಟೋಬರ್ ಮರಿ ಇದ್ವು. ಭಾಗ್ಯಲಕ್ಷ್ಮಮ್ಮ ಸುರೇಶ ಇನ್ನೂ ನಮ್ಮ ಮನೆ ಮೆಟ್ಲುಗಳನ್ನ ಹತ್ತುತ್ತಾ ಇದ್ರು.

"ಬಂದ್ಲು ಜಂಬದ ಕೋಳಿ" ಅಂತೂ ಟೋಬರ್ ಮರಿ ನನ್ನ ಎದೆಯಲ್ಲಿ 'ಢಫ್!' ಅಂತು.

"ಬನ್ನೀ ಭಾಗ್ಯಮ್ಮ, ಬಾಪ್ಪಾ ಸುರೇಶು. ಮಗಳ ಮದುವೇಂತ ಕೇಳಿದೆ" ಅಂದ್ರು ಅಮ್ಮ.

"ಏನೋಮ್ಮ-ಇದೊಂದು ಜವಾಬ್ದಾರಿನ ನಾವು ತೀರಿಸಬೇಕು. ಎಷ್ಟು ಕಷ್ಟವಾಗ್ಲಿ ನಮ್ಮ ಕರ್ತವ್ಯ ಅಲ್ವೆ?" ಅಂದ್ರು ಭಾಗ್ಯಲಕ್ಷ್ಮಮ್ಮ.

"ಹೌದಮ್ಮಾ ಹೌದು. ಇವರ ಮನೆ ಹುಡುಗಿಗೆ ಗಂಡು ಹುಡುಕೋದು ಗಂಡಾಂತರವೇ!" ಅಂತ ಬಾಯಿ ಹಾಕಿತು ಟೋಬರ್ ಮರಿ.

ನಾನು ಬೆವತು ಹೋದೆ. ನನ್ನಮ್ಮ ನನ್ನ ಮುಖ ನೋಡಿ ಕೂಲ್‌ಡ್ರಿಂಕ್ಸ್ ಮಾಡಿಕೊಂಡು ತರೋಕೆ ಒಳಗೆ ಹೋದರು. ಭಾಗ್ಯಲಕ್ಷ್ಮಮ್ಮ ಸುರೇಶ ಬೆವರೊರ ಸಿಕೊಂಡರು. ಅವರುಗಳ ಮುಖ ಬಿಳುಚಿಕೊಂಡು ಹೋಗಿತ್ತು. ಆದರೆ ಅವರಿಬ್ಬರಿಗೂ ಟೋಬರ್ ಮರಿ ಆಡಿದ ಮಾತು ಸರಿಯಾಗಿ ಕಿವಿಗೆ ಬಿದ್ದಹಾಗೆ ಇರಲಿಲ್ಲ.

ಕೂಲ್‌ಡ್ರಿಂಕ್ಸ್ ಕುಡಿದು ಭಾಗ್ಯಲಕ್ಷ್ಮಮ್ಮ ಅಮ್ಮನ ಕೈಲಿ ಲಗ್ನಪತ್ರಿಕೆ ಮಂತ್ರಾಕ್ಷತೆ ಕೊಟ್ರು. ಸುರೇಶ ಟೋಬರ್ ಮರಿ ಕಡೆ ನೋಡ್ತಿದ್ದ.

"ಕುಚಲಾಂಬಾದಲ್ಲವ್ಮ ಐದು ದಿನಗಳ ಮದುವೆ. ನೀವುಗಳು ಐದು ದಿನಾನು ಬರಬೇಕಮ್ಮ. ಯಜಮಾನ್ರು ಮಕ್ಕಳಿಗೂ ಹೇಳ್ದೀ ಅನ್ನೀಮ್ಮ" ಅಂದ್ರು ಭಾಗ್ಯಲಕ್ಷ್ಮಮ್ಮ.

"ತುಂಬಾ ಅದ್ಧೂರಿ ಮದುವೆ ನಡೆಸ್ತೀರಿ" ಅಂತ ಅಮ್ಮ ಹೊಗಳಿದರು.

"ಅಷ್ಟು ಮಾಡ್ದಿದ್ರೆ ಇವರ ಮಗಳನ್ನ ಯಾವ ಗಂಡು ಮೂಸಿ ನೋಡ್ತಾ ಇದ್ದ" ಅಂತ ನುಡಿಯಿತು ಟೋಬರ್ ಮರಿ.

ನನಗೆ ಮೈಯೆಲ್ಲಾ ಬೆಂಕಿ ಬೆಂಕಿಯಾಯ್ತು. ಟೋಬರ್ ಮರಿಯ ಕತ್ತು ಹಿಸುಕಿ ಬಿಡಲೇ ಅನ್ನಿಸಿತು.

"ಏನಮ್ಮ ನೋಡೋದು ? ಎಷ್ಟೋ ಗಂಡುಗಳು ನಾಮುಂದು ತಾಮುಂದು ಅಂತ ಸುಧಾನ ಲಗ್ನ ಆಗೋಕೆ ಬಂದ್ವು.

ಆದ್ರೆ ನಮಗೆ ಯಾವುದೂ ಸರಿಯಾಗಿ ಕೂಡಿಬರಲಿಲ್ಲ. ಈಗ ಅಳಿಯ ಅಗೋ ಗಂಡು ಒಳ್ಳೆಯ ಮನೆತನದೋನು. ವಿದ್ಯಾವಂತ. ಒಳ್ಳೆಕೆಲ್ಸ ಇದೆ. ಆಸ್ತಿ ಪಾಸ್ತಿಗೆಲ್ಲಾ ನಾವು ಮಾರು ಹೋಗಲಿಲ್ಲ...."

"ವರದಕ್ಷಿಣೆ ಏನಾದ್ರೂ ಕೊಟ್ಟಿರೋ ?" ಅಮ್ಮ ಕೇಳಿದರು.

"ಛೆ! ಆ ಮಾತೇ ಎತ್ತ ಕೂಡ್ದು ಅಂದು ಬಿಟ್ನಮ್ಮಾ ರತ್ನದಂಥಾ ಹುಡುಗ"

ಭಾಗ್ಯಲಕ್ಷ್ಮಮ್ಮ ತಮ್ಮ ಮಾತನ್ನು ಇನ್ನೂ ಮುಗಿಸಿರಲಿಲ್ಲ........

"ಎಲ್ಲಾ ಭೂಸಿ! ಶುದ್ಧ ಸುಳ್ಳು! ಪಕ್ಕಾ ಬೊಗಳೆ! ಇವರ ಹುಡುಗಿ ಕಾಲೇಜಿನಲ್ಲಿ ಓದ್ತಾ ಇದ್ದಾಗ್ಲೇ ಮೂರು ದಿನ ಮನೆಯಿಂದ ನಾಪತ್ತೆಯಾಗಿದ್ದ ವಿಷಯ ಲೋಕಕ್ಕೇ ತಿಳಿದಿದೆ. ಐವತ್ತು ಸಾವಿರದ ಆಸೆ ತೋರ್ಸಿದ್ರೂ ಒಂದು ಪೈಸವಾದ ಗಂಡು ಸಿಗ ಲಿಲ್ಲ. ಕಡೆಗೆ ಇವರ ಮನೆಲಿ ಅಡಿಗೆ ಮಾಡೋಕೆ ಇಟ್ಕೊಂಡಿರೋ ಹೆಂಗ್ಸು ಕಾವೇ ರಮ್ಮನ ಮಗ ಶುದ್ಧ ಪುಂಡಿ, ಶುದ್ಧ ಜೂಜು ಕೋರ ಶುದ್ಧ ದಗಲ್‌ಬಾಜಿ ಅವನನ್ನ ಹಿಡುಕೊಂಡು ಬಂದು, ತಾವು ಕದ್ದು ಶೇಖರಿಸಿಟ್ಟಿರೋ ಸಿಮೆಂಟಿನಿಂದ್ಲೇ ಒಂದು ಮನೆ ಕಟ್ಟಿಸಿಕೊಟ್ಟು, ಐವತ್ತು ಸಾವಿರ ರೂಪಾಯಿ ಡಿಪಾಸಿಟ್ ಮಾಡಿ ಜೊತೆಗೆ ತಿಂಗಳು ತಿಂಗ್ಳೂ ಸಂಸಾರ ನಡೆಸೋಕೇಂತ ಐನೂರು ರೂಪಾಯಿ ಕೊಡ್ತೇವೇಂತ ಪುಸಲಾಯ್ಸಿ ಒಪ್ಪಿಸಿದರು. ರತ್ನದಂಥಾ ಹುಡುಗನಂತೆ ! ನಾಚ್ಗೆ ಇಲ್ದೆ ಹೇಳ್ಕೋ ತ್ತಾರೆ !"

ಟೋಬರ್ ಮರಿ ಇಷ್ಟನ್ನೂ ಉಸಿರುಬಿಡ್ದೆ ಹರಟಿ ಬಿಟ್ಟು ಕೇಕೆ ಹಾಕ್ಕೊಂಡು ನಕ್ಕಿತು.

ಆವರೆ ಅದರ ಪೂರ್ತಿ ಮಾತನ್ನ ಕೇಳೋಕೆ ಭಾಗ್ಯಲಕ್ಷ್ಮಮ್ಮ ಸುರೇಶನಿಗೆ ಮುಖ ಇರಲಿಲ್ಲ. ಕೊಳ್ಳಿದೆವ್ವಾನ ಕಂಡೋರ ಹಾಗೆ ಧಡಧಡಾಂತ ಮೆಟ್ಟಿಲಿಳಿದು ಓಡಿಹೋದರು.

ನನಗಂತೂ ಟೋಬರ್ ಮರೀಮೇಲೆ ಬಂದಿದ್ದ ಕೋಪಾನ ತಡೆಯೋಕಾಗಲಿಲ್ಲ. ಚೆನ್ನಾಗಿ ಎರಡು ಬಿಗಿಯೋಣಾಂತ ನನ್ನ ಕೈ ಎತ್ತಿದೆ. ಕೈರಗ್ಗಿಗೆ ತಿಕ್ಕಿ ಎಚ್ಚರವಾಯ್ತು ನನ್ನ ಪಕ್ಕದಲ್ಲಿ ನನ್ನನ್ನಪ್ಪಿಕೊಂಡು ಟೋಬರ್ ಮರಿ ಸುಖವಾಗಿ ಮಲಗಿತ್ತು. ನಾನು ಅದನ್ನು ಮತ್ತೂ ಅಪ್ಪಿಕೊಂಡು ಮಲಗಿದೆ.

'ನೀನೂ, ಗುಳ್ಡುಮಿಯಾ' ಅವಳನ್ ಲೌಮಾಡ್ತೀ fool ಅಂತು" ಇನ್ನೆಲ್ಲಿಯ ನಿದ್ದೆ.


'ಸ್ಥಳ ಬದಲಾವಣೆ ಅಷ್ಟೆ'

ತೋಟದಿಂದ ಬಿಸಿಲಿನಲ್ಲಿ ಮನೆಗೆ ಬಂದ ಯಜಮಾನ ಬೆವತಿದ್ದ. ಆರಾಮ ಖುರ್ಚಿಯಮೇಲೆ ಕುಳಿತು ತನ್ನ ಪುಟ್ಟಸೇವಕನಿಗೆ ಗಾಳಿಹಾಕು ಎಂದು ಆಜ್ಞಾಪಿಸಿದ.

'ಇನ್ನೂ ಜೋರಾಗಿ, ಇನ್ನೂ ಜೋರಾಗಿ' ಎಂದು ನಿಮಿಷ ನಿಮಿಷವೂ ಕೂಗಿ ಆ ಸಣ್ಣ ಹುಡುಗನಿಗೆ ಉಸಿರುತೆಗೆದುಕೊಳ್ಳಲು ಅವಕಾಶ ಕೊಡುತ್ತಿರಲಿಲ್ಲ. ಅರ್ಧ ಗಂಟೆಯ ನಂತರ ಸಮಾಧಾನದ ಉಸಿರುಬಿಟ್ಟ

'ಸಧ್ಯ ಈಗ ಎಲ್ಲಾ ಬೆವರು ಆರಿಹೋಯಿತು' ಎಂದ ಯಜಮಾನ. ಬಾಲಕ ಸಣ್ಣಧ್ವನಿಯಲ್ಲಿ ಹೇಳಿದ 'ಸ್ವಾಮಿ ಅದು ಆರಲಿಲ್ಲ. ಸ್ಥಳ ಬದಲಾವಣೆ ಮಾಡಿದೆ ಅಷ್ಟೆ' ಎಂದು ತನ್ನ ಹಣೆಯನ್ನು ತೋರಿಸಿದ.

ಶುಭಾಶಯಗಳೊಂದಿಗೆ-



ಲಲನಾಮಣಿ ಕನ್ನಡ ಸಾಹಿತ್ಯದ ಉದಯತಾರೆ. ಇವರ ಮೊದಲ ಕಾದಂಬರಿ ಪ್ರಕಟವಾದದ್ದು ಐದುವರ್ಷಗಳ ಹಿಂದೆ. ಅಲ್ಲಿಂದೀಚಿನ ಅಲ್ಪ ಅವಧಿಯಲ್ಲಿ ಇವರು 28 ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ 5 ಜನಪ್ರಿಯ ಪತ್ರಿಕೆಗಳಲ್ಲಿ ಧಾರವಾಹಿಗಳಾಗಿ ಹರಿದಿವೆ. ಒಂದು ಸಿನಿಮಾ ಸಹ ಆಗಿದೆ. ಇನ್ನೂ ಕೆಲವು ಬೆಳ್ಳಿ ತೆರೆಯ ಮೇಲೆ ಮಿಂಚಲಿವೆ ಎಂದು ಆಗಾಗ ಪತ್ರಿಕಾ ವರದಿಗಳು ಬರುತ್ತಿರುತ್ತವೆ. ಲಲನಾಮಣಿಯನ್ನು ಈಚೆಗೆ ಭೇಟಿಯಾಗುವ ಸಂದರ್ಭ ಬಂದಿತ್ತು. ಅವರ ಕೊರೆತದಿಂದ ನಾಲ್ಕು ಗಂಟೆಗಳ ಕಾಲ ತಪ್ಪಿಸಿಕೊಳ್ಳಲು ಆಗಲಿಲ್ಲ. ಆ ದುರದೃಷ್ಟ ಮುಖಾಮುಖಿಯ ಕೆಲವು ಭಾಗಗಳು.

ನಾನು:- 'ನಿಮಗೆ ನಿಮ್ಮ ಸಾಹಿತ್ಯ ಶಕ್ತಿಯ ಬಗೆಗೆ ಮೊದಲು ತಿಳಿದಿದ್ದು?'

ಲಲನಾ:- 'ನಾನು ಏಳನೆಯ ತರಗತಿಯಲ್ಲಿ ಓದುತ್ತಿದ್ದಾಗ ತೆಂಗಿನಮರದ ಮೇಲೆ ಪ್ರಬಂಧ ಬರೆಯಿರಿ ಎಂದು ಕನ್ನಡ ಪಂಡಿತರು ಮನೆಪಾಠ ಕೊಟ್ಟಿದ್ದರು. ನನ್ನ ಸಹಪಾಟಿಗಳು ಒಂದೆರಡು ಪ್ಯಾರ ಬರೆಯಲು ತಿಣುಕಾಡುತ್ತಿದ್ದಾಗ ನಾನು 32ಪುಟದ ಎಕ್ಸರ್‌ಸೈಜ್ ಪುಸ್ತಕವನ್ನು ಪ್ರಬಂಧದಿಂದ ತುಂಬಿಸಿದ್ದೆ'

ನಾನು:- 'ಪಂಡಿತರಿಗೆ ತಮ್ಮ ಶಿಷ್ಯೆಯ ಪ್ರತಿಭೆಕಂಡು ತುಂಬಾ ಖುಷಿಯಾಗಿರಬೇಕು.

ಲಲನಾ:- 'ಅದೇನೋ ನನಗೆ ಗೊತ್ತಿಲ್ಲ. ಅವರು ಮಾತ್ರ ಕೆಂಪು ಮಸಿಯಲ್ಲಿ ಅಸಂಬದ್ಧ ಎಂದು ಬರೆದಿದ್ದರು.'

ನಾನು:- ನಿಮಗೆ ಆಗ ತುಂಬಾ ನಿರಾಶೆಯಾಗಿರಬೇಕು.'

ಲಲನಾ:- 'ನಿಜ ಹೇಳಬೇಕೆಂದರೆ ಆ ಪದದ ಅರ್ಥ ನನಗೆ ಗೊತ್ತಿರಲಿಲ್ಲ. ಇದು ವೆರಿಗುಡ್ ಎಂದೇ ಇರಬೇಕು ಎಂದು ಎಲ್ಲರಿಗೂ ಅದನ್ನು ತೋರಿಸಿಕೊಂಡುಬಂದಿದ್ದೆ'

[ಇದನ್ನು ಓದಿದ ನನ್ನ ವಿಮರ್ಶಕ ಮಿತ್ರ, ಲಲನಾಮಣಿಗೆ ಅಸಂಬದ್ಧ ಪದದ ಅರ್ಥ ಈಗಲೂ ಗೊತ್ತಿಲ್ಲ. ಆದರಿಂದ ಅವರಿಗೆ ಇಷ್ಟೊಂದು ಬರೆಯಲು ಸಾಧ್ಯವಾಗಿದೆ ಎನ್ನುತ್ತಾನೆ]

ತೆಂಗಿನಮರದ ಮೇಲಿನ 32 ಪುಟದ ಪ್ರಬಂಧದಿಂದ 200 ಪುಟದ ಕಾದಂಬರಿಗೆ ಎಷ್ಟು ಮಹಾ ದೂರ? ಶಾಲೆ ಲಲನಾಮಣಿಯನ್ನು ಬಿಡುವಹೊತ್ತಿಗೆ ಅವರ

ಪೆಟ್ಟಿಗೆಯಲ್ಲಿ ಮೂರು ಕಾದಂಬರಿಗಳೇ ಸಿದ್ಧವಾಗಿ ಕುಳಿತಿದ್ದವು. ಆದರೆ ಹೊಸಬರ ಪ್ರತಿಭೆಯನ್ನು ಗುರುತಿಸುವ ಪ್ರಕಾಶಕರು ನಮ್ಮಲ್ಲಿಲ್ಲಿದ್ದಾರೆ?

ಲಲನಾಮಣಿಯ ಮೊದಲ ಕೃತಿ ಹೊರಬರಲು ಸಾಧ್ಯವಾದದ್ದು ಅವರ ಒಂದು ಕ್ರಾಂತಿಕಾರಕ ಆಲೋಚನೆಯಿಂದ ಪುರುಷ ಪ್ರಧಾನವಾದ ಸಾಹಿತ್ಯ ಕ್ಷೇತ್ರದಲ್ಲಿ ಲಲನಾಮಣಿಯರ ಈ ನವನವೀನ ವಿಧಾನಕ್ಕೆ ಸೂಕ್ತವಾದ ಪ್ರಚಾರ ಸಿಕ್ಕಿಲ್ಲದಿರುವುದು ದುರಾದೃಷ್ಟ. ಅವರ ಪದ್ಧತಿ ಇಂದಿನ ತರುಣಿ-ತರುಣಿಯರಿಗೆ ಮಾರ್ಗದರ್ಶಕವಾಗಬಲ್ಲದು.

ಅವರು ಹೇಳುತ್ತಾರೆ 'ನಮ್ಮ ಮನೆಯಲ್ಲಿ ಆಗ ಒಂದು ಮದುವೆ ನಡೆಯುವುದಿತ್ತು. ಸಾಧಾರಣವಾಗಿ ಮದುವೆಗಳಲ್ಲಿ ನೆಂಟರ ಹೆಣ್ಣುಮಕ್ಕಳಿಗೆ 70 ಸೆ. ಮೀ. ಟೂ-ಬೈ-ಟೂ ಜಾಕೀಟು ಬಟ್ಟೆ ಅಥವಾ ಜೊತ್ರ ತಗಡಿನ ಶರಪಂಜರ, ಸ್ಟೀಲ್ ಲೋಟ ಕೊಡುವುದು ಪದ್ಧತಿ. ಅದರ ಬದಲು ನೆಂಟರಿಗೆಲ್ಲಾ ನನ್ನ ಕಾದಂಬರಿಯನ್ನೇಕೆ ಕೊಡಬಾರದು ಎಂದು ನಾನು ಸೂಚಿಸಿದೆ. ನಮ್ಮ ಅಪ್ಪ ಒಪ್ಪಿಕೊಂಡರು. ನಾವೇ 500 ಪ್ರತಿ ಕೊಳ್ಳುತ್ತೇವೆ ಎಂದು ತಿಳಿದಾಗ ಪ್ರಕಾಶಕರು ಪುಸ್ತಕ ಮುದ್ರಿಸಲು ಒಪ್ಪಿಕೊಂಡರು.

ಲಲನಾಮಣಿ ತಮ್ಮ ಕಾದಂಬರಿ ಧಾರವಾಹಿಯಾಗಿ ಬರುವಂತೆ ಮಾಡಲು ಅನುಸರಿಸಿದ್ದು ಬೇರೆತಂತ್ರ. ಸಂಪಾದಕರಿಗೆ ಮೊದಲು 200 ಪುಟದ ಕಾದಂಬರಿ ಕಳುಹಿಸಿದರು. ಇದನ್ನು ಪ್ರಕಟಿಸಲು ಆಗುವುದಿಲ್ಲ ಎಂದು ಹಿಂದೆ ಕಳುಹಿಸಿದಾಗ 300 ಪುಟದ ಬೇರೆ ಕಾದಂಬರಿ ಕಳುಹಿಸಿದರು. ಅದು ಹಿಂದೆ ಬಂದಾಗ 400 ಪುಟ, 500 ಪುಟ ಹೀಗೆ 700 ಪುಟದ ಕಾದಂಬರಿ ಬಂದಾಗ ಸಂಪಾದಕರು ಸೋಲನ್ನು ಒಪ್ಪಿಕೊಂಡರು. ಮೊದಲು ಕಳುಹಿಸಿದ್ದ 200 ಪುಟದ ಕಾದಂಬರಿಯನ್ನೇ ಕೊಡಿ. ಅದನ್ನೆ ಪ್ರಕಟಿಸುತ್ತೇವೆ ಎಂದರು. ಇದೇ ತಂತ್ರವನ್ನು ಬೇರೆ ಬೇರೆ ಪತ್ರಿಕೆಗಳಲ್ಲಿ ಉಪಯೋಗಿಸಿದ್ದಾರೆ. ಇನ್ನೊಂದು ಕಾದಂಬರಿ ಧಾರವಾಹಿಯಾಗಲು ಇನ್ನೊಂದು ಹೊಸ ಪತ್ರಿಕೆ ಪ್ರಾರಂಭವಾಗುವುದನ್ನು ಕಾಯುತ್ತಿದ್ದಾರೆ.

ಲಲನಾ:- 'ನನ್ನ ಕಾದಂಬರಿ ಸಿನಿಮಾ ಆಗಲು ನೆರವಾಗಿದ್ದು ನಮ್ಮ ಚಿಕ್ಕಪ್ಪ'

ನಾನು:- 'ಅವರೇ ಚಿತ್ರನಿರ್ಮಾಪಕರಿರಬೇಕು?'

ಲಲನಾ:- 'ಅಲ್ಲ ಅವರು ಪ್ರಸಿದ್ಧ ಜ್ಯೋತಿಷ್ಯರು. ಅವರ ಹತ್ತಿರ ಸಿನಿಮಾ ಮಾಡಲು ಉದ್ದೇಶವಿದ್ದ ಒಬ್ಬರು ಬಂದಿದ್ದರಂತೆ. ಅವರಿಗೆ ಸಂಖ್ಯಾ ಶಾಸ್ತ್ರ ಜ್ಯೋತಿಷ್ಯದ

ಆಧಾರದ ಮೇಲೆ, 'ಲ'ಕಾರದಿಂದ ಪ್ರಾರಂಭವಾಗುವ ಹೆಸರಿನವರ 'ಮ' ಕಾರದಿಂದ ಪ್ರಾರಂಭವಾಗುವ ಪುಸ್ತಕವನ್ನು ಸಿನಿಮಾ ಮಾಡಿ ಲಾಭ ಖಂಡಿತ ಎಂದು ಭವಿಷ್ಯ ಹೇಳಿದ್ದರು. ಚಿಕ್ಕಪ್ಪನವರ ಸೂಚನೆಯಂತೆ ನನ್ನ ಆಗಿನ ಹೊಸ ಕಾದಂಬರಿ 'ಮಾತೆಯ ಮಮತೆಯ ಮನೋಮಂದಿರ' ಆ ನಿರ್ಮಾಪಕರಿಗೆ ಸಿಗುವಂತೆ ಮಾಡಿದೆ ಅದೂ ಸಿನಿಮಾ ಆಯಿತು. ನಾನು-'ಅದೇ ನಿರ್ಮಾಪಕರೇ ನಿಮ್ಮ ಬೇರೆ ಕಾದಂಬರಿ ಗಳನ್ನು ತೆಗೆದುಕೊಳ್ಳುತ್ತಾರೆಯೆ?'

ಲಲನಾ:- "ಏನೋ ಗೊತ್ತಿಲ್ಲ. ಈಗ ಅವರು ಅದು ಯಾವುದೋ ಊರಿನಲ್ಲಿ ಬಸ್ ಸ್ಟ್ಯಾಂಡಿನಲ್ಲಿ ಲಾಟರಿ ಟಿಕೇಟ್ ಮಾರುತ್ತಿದ್ದಾರಂತೆ"

ಈ ಹಿನ್ನೆಲೆಯಲ್ಲಿ ಲಲನಾಮಣಿಯವರ ಸಾಹಿತ್ಯ ಕಾಯಕವನ್ನು ಗಮನಿಸಿ ಲಲನಾ-ನನಗೆ ಒಂದು ಹೊಸಕಾದಂಬರಿ ಬರೆಯಲು, ಒಂದು ಆಕರ್ಷಕ 'ಶೀರ್ಷಿಕೆ ಹಾಗೂ ಅಲ್ಲಿನ ನಾಯಕಿ ಅವಳ ಮಕ್ಕಳಿಗೆ ತುಂಬಾ ಆಧುನಿಕವಾದ ಹೆಸರುಗಳು ಸಿಗಲೇಬೇಕು. ಇವುಗಳಿಗಾಗಿ ನಾನು ಎಷ್ಟು ಬೇಕಾದರೂ ಕಷ್ಟಪಡುತ್ತೇನೆ.

ನಾನು:-'ಕಾದಂಬರಿಯ ವಿಷಯ, ವಸ್ತು'?

ಲಲನಾ:- ಅದಕ್ಕೆಲ್ಲಾ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಬರೀತಾ ಹೋದಾಗ ಅದೇ ಬರುತ್ತೆ. ಉದಾಹರಣೆಗೆ ನನ್ನ ಒಂದುಕಾದಂಬರಿಯ ನಾಯಕ ಬಟ್ಟೆ ಅಂಗಡಿಯ ಮಾಲೀಕ. ನಾಯಕಿ ಅಲ್ಲಿನ ಸೇಲ್ಸ್‌ಗರ್ಲ್‌ಆಗಿ ಸೇರಿದವಳು. ಇವರ ಮದುವೆಗೆ ಅಡ್ಡಿ ಮಾಲಿಕನ ವಿಧವೆತಾಯಿ. ಈ ಕಾದಂಬರಿಯಲ್ಲಿ ನಾಯಕಿಯ ತಂದೆ, ತಾಯಿ, ಚಿಕ್ಕಪ್ಪ ನಾಯಕನ ಸೋದರಮಾವ, ಅಂಗಡಿಮ್ಯಾನೇಜರ್, ಮನೆಯ ನಾಯಿ, ಕ್ರಮವಾಗಿ 15, 30, 45, 60, 75 ನೇ ಪುಟಗಳಲ್ಲಿ ಸಾಯುತ್ತಾರೆ. ಇನ್ನೊಂದು ಕಾದಂಬರಿ ಯಲ್ಲಿ ನಾಯಕ ದೊಡ್ಡ ಆಫೀಸರ್. ಸಾಯುವವರು ಒಟ್ಟು 12 ಜನ. ಇನ್ನೊಂದು ಕಾದಂಬರಿಯ ನಾಯಕ ಲೇಖಕಿ. ಸಾಯುವವರು. ....

ನಾನು:- ಸರಿ ಗೊತ್ತಾಯಿತು ನಿಮ್ಮ ಬರವಣಿಗೆ ವಿಶಿಷ್ಟ ಅಂಶವೇನು"?

ಲಲನಾ:- ನನ್ನ ಒಬ್ಬಳ ನಾಯಕಿ ಉಟ್ಟಂತಹ ಸೀರೆಯನ್ನು ಇನ್ನೊಬ್ಬಳು ಉಡುವು ದಿಲ್ಲ. ಈ ವಿಚಾರದಲ್ಲಿ ನಾನು ತುಂಬಾ ಕಟ್ಟುನಿಟ್ಟು ಹಾಗೆಯೇ ಯುವ ನಾಯಕ ನಾಯಕಿಯರು ಯಾವಾಗಲೂ ಬೇರೆಬೇರೆ ಹೋಟೆಲ್‌ಗೆ ಹೋಗುತ್ತಾರೆ. ಬೆ ರೆಬೇರೆ ತಿಂಡಿನೇ ತಿನ್ನುತ್ತಾರೆ.........

ನಾನು:- 'ನೀವು ಆಧುನಿಕ ಮಹಿಳೆಯನ್ನು ಚಿತ್ರಿಸುವುದಿಲ್ಲ. ನಾಯಕಿ ವರ್ತನೆ ತೀರಾ ಸಂಪ್ರದಾಯಿಕ ಎನ್ನುವ ಟೀಕೆ ಇದೆಯಲ್ಲ'?

ಲಲನಾ:- 'ಹೀಗೆ ಅನ್ನುವವರು ನನ್ನ ಕಾದಂಬರಿ ಓದಿಲ್ಲ. ನನ್ನ ಒಂದು ಕಾದಂಬರಿಯಲ್ಲಿ ನಾಯಕಿ ಸ್ಲೀವ್‌ಲೆಸ್ ರವಿಕೆ ತೊಟ್ಟಿದ್ದಾಳೆ. ಇನ್ನೊಂದರಲ್ಲಿ ನಾಯಕಿಯ ತಂಗಿಯರು ಬಾಬ್‌ಕಟ್'........

ನಾನು:- 'ನನ್ನ ಪ್ರಶ್ನೆಯ ಉದ್ದೇಶ ಅದಲ್ಲ. ಅವರ ಚಿಂತನೆ, ಯೋಚನೆ ಆಧುನಿಕವಲ್ಲ ಎನ್ನುವುದು'

ಲಲನಾ:- 'ನನ್ನ ಪಾತ್ರಗಳಿಗೆ ಚಿಂತಿಸಲು ಪುರಸೊತ್ತಿರುವುದಿಲ್ಲ. ನನ್ನ ಕಾದಂಬರಿಯನ್ನು ಓದುವವರು ಮುಂದೆ ಏನಾಗುತ್ತೆ ಅಂತ ಕಾಯುತ್ತಿರುತ್ತಾರೆ. ನನ್ನ ಪಾತ್ರಗಳು ಯೋಚನೆಮಾಡುತ್ತಾ ಕುಳಿತರೆ ಓದುಗರು ಆಪುಟಗಳನ್ನು ಹಾರಿಸುತಾರೆ'.

ನಾನು;- 'ನಿಮ್ಮ ಬರವಣಿಗೆಯ ವಿಧಾನವನ್ನು ತಿಳಿಸುತ್ತೀರಾ'

ಲಲನಾ:- 'ನಾನು ಈಗ ಮೂರು ಷಿಫ್ಟನಲ್ಲಿ ಕೆಲಸ ಮಾಡುತ್ತಿದ್ದೇನೆ. ಯಾವಾಗಲು ಎರಡು ಕಾದಂಬರಿಗಳು ಸಿದ್ಧವಾಗುತ್ತಿರುತ್ತವೆ. ಒಂದನ್ನು ಬೆಳಿಗ್ಗೆ ಒಂದನ್ನು ರಾತ್ರಿ ಮುಂದುವರಿಸುತ್ತಿರುತ್ತೇನೆ. ಮಧ್ಯಾಹ್ನ ಸಣ್ಣಪುಟ್ಟ ಕತೆ, ಹರಟೆ ಬರೆಯುತ್ತೇನೆ. ಸಂಜೆ ಅಧ್ಯಯನಕ್ಕೆ ಮೀಸಲು'

ನಾನು:- 'ಅಂದರೆ ಪುಸ್ತಕ ಭಂಡಾರದಲ್ಲಿ ಓದುತ್ತಿರುತ್ತೀರಿ'

ಲಲನಾ:- 'ಅಲ್ಲಾ ನಾನು ಪ್ರತಿ ಸಂಜೆ ಸೀರೆ ಅಂಗಡಿಗಳಿಗೆ ಹೊಸ ಫ್ಯಾಷನ್ ಆಭರಣ ಅಲಂಕಾರವಸ್ತುಗಳನ್ನು ಮಾರುವ ಕಡೆಗಳಿಗೆ ಹೋಗಿ ಇಂದಿನ ಜನರ ಇಷ್ಟಾನಿಷ್ಟಗಳನ್ನು ಅರಿಯಲು ಪ್ರಯತ್ನಿಸುತ್ತಿರುತ್ತೇನೆ. ಈ ಸೀರೆ, ಆಭರಣ ಅಲಂಕಾರಗಳನ್ನು ನನ್ನ ನಾಯಕಿಯರು ತೊಡುವುದರಿಂದ ನನ್ನ ಕಾದಂಬರಿಗಳಿಗೆ ಬೇಡಿಕೆ ಚೆನ್ನಾಗಿದೆ'.

ನಾನು:- 'ಸಾಹಿತ್ಯಕ್ಷೇತ್ರದಲ್ಲಿ ನಿಮ್ಮಗುರಿ'

ಲಲನಾ;- 'ಕನ್ನಡ ಭುವನೇಶ್ವರಿಗೆ 1008 ಕಾದಂಬರಿಗಳ ರತ್ನಹಾರ ಹಾಕಬೇಕೆನ್ನುವುದು ನನ್ನ ಬಯಕೆ. ವರ್ಷಕ್ಕೆ 50 ಕಾದಂಬರಿ ಬರೆದರೆ 20 ವರ್ಷದಲ್ಲಿ ಇದನ್ನು ಸಾಧುಮಾಡಿಕೊಳ್ಳಬಹುದು ಎಂದು ಲೆಕ್ಕಹಾಕಿದ್ದೇನೆ!

ಕನ್ನಡಮ್ಮನ ಹಣೆಯಲ್ಲಿ ಇದೂ ಬರೆದಿದ್ದರೆ ತಪ್ಪಿಸಲು ನಾನು, ನೀವು ಯಾರು?

ಸರ್ವ ಸಮಾರಂಭಗಳಿಗೂ ಒಂದೇ ಮಂತ್ರ ಚಿ. ರಾ. ಅಣ್ಣಾಜಿ

"ಈಗ ಒಂದು ಕವನ ಓದುತ್ತೇನೆ" ಎಂದರು ಮುಖ್ಯ ಅತಿಥಿಗಳು ಹೆಚ್. ಪಿ. ಕಾಲೇಜುಗಳಲ್ಲಿ ನಮ್ಮ ಸಮೀಪದ ಕಾಲೇಜಿನವರು ಭೌತಶಾಸ್ತ್ರ ಉಪನ್ಯಾಸಕರು.

ಸಂದರ್ಭ: ರಾಮನ್ ಪರಿಣಾಮದ ಸ್ವರ್ಣಮಹೋತ್ಸವ ಸರ್. ಸಿ. ವಿ. ರಾಮನ್ ಮತ್ತು ಅವರ ಸಂಶೋಧನೆಯ ಪ್ರಮುಖ ವಿಷಯಗಳನ್ನು ಕ್ಷಿಪ್ರದಲ್ಲಿಯೇ ಮುಗಿಸಿ ತಾವು ರಚಿಸಿದ ಭಾವಗೀತೆಯನ್ನು ಮುಖ್ಯ ಅತಿಥಿಗಳು ಓದಿಯೇ ಬಿಟ್ಟರು ನಂತರ ಅವರೊಡನಿದ್ದ ನಮ್ಮ ವಿಶ್ವಾಸಿಗಳಾದ ಮತ್ತೊಬ್ಬರು ಭಾರತ ವಾಚನ ಮಾಡಿದರು. ನಮ್ಮ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ತಾಲ್ಲೋಕು ಮಟ್ಟದ ಸಮಾರಂಭ. ಮುಖ್ಯ ಅತಿಥಿಗಳು ಅರ್ಥಶಾಸ್ತ್ರಜ್ಞರು ವಿಷಯ–ಭಾರತದ ಆರ್ಥಿಕ ಸಮಸ್ಯೆಗಳು, ಸುಶ್ರಾವ್ಯ ಪ್ರಾರ್ಥನೆ, ಸ್ವಾಗತ ಭಾಷಣ ಗಳ ನಂತರ ಅಧ್ಯಕ್ಷರ ಕೋರಿಕೆಯ ಮೇರೆಗೆ ಅತಿಥಿಗಳು ಎದ್ದು ನಿಂತರು. "ಈಗ ಒಂದು ಕವನ ಓದುತ್ತೇನೆ.... ಎಂದರು. ಜಾನಪದಗೀತೆ ಎಂದು ಸ್ಪಷ್ಟಪಡಿಸಿದರು. ಮಹದೇಶ್ವರನ ಮೇಲಿನ ಒಂದು ಗೀತೆಯನ್ನು ಹಾಡಿದರು. ಚೆನ್ನಾಗಿತ್ತು. ಭಾಷಣ ದ ನಂತರ ಪ್ರಶ್ನೋತ್ತರ ವೇಳೆಗೆ ಮೊದಲು "ಇನ್ನೊಂದು ಗೀತೆ...." ನಂತರ ಪ್ರಶ್ನೋತ್ತರ ಕಾರ್ಯಕ್ರಮ, ಅಧ್ಯಕ್ಷ ಭಾಷಣ ಇತ್ಯಾದಿ ಇತ್ಯಾದಿ.

ಮತ್ತೊಂದು ಅಪರೂಪದ ಸಂದರ್ಭ. ತಾಲ್ಲೋಕು ಮಟ್ಟದ ಭಾಷಣ ಸ್ಪರ್ಧೆ (ಹೆಚ್. ಪಿ. ಶಾಲೆಗಳ ಮಕ್ಕಳಿಗಾಗಿ) ಮೂರು ಜನ ತೀರ್ಪುಗಾರರು "ನಾಮ ದಾರ" (chonourable) ತೀರ್ಪುಗಾರರ ಪರವಾಗಿ ಭಾಷಣಮಾಡಲು ಉದಯೋ ನ್ಮುಖ ಯುವ ಬುದ್ಧಿಜೀವಿಯೊಬ್ಬರನ್ನು ಪ್ರಾರ್ಥಿಸಿದೆವು. ಈ ಪ್ರಾರ್ಥನೆಯಿಂದ (ನಮಾಜಿನಿಂದ) ಮಸೀದಿ ಕೊರಳಿಗೆ ಬಿತ್ತು. ಹಿರಿಯ ತೀರ್ಪುಗಾರರಿಗೆ ಹೇಳಿಬಿಡಿ ಸರ್ "ನಾನು" ಎಂದರು.. ಮೈಕ್ ತೆಗೆದುಕೊಳ್ಳುತ್ತಾ ಹೀಗೆ ಅನೌನ್ಸಿದರು "ಈಗ ಒಂದು ಕವನ ......ಓದುತ್ತೇನೆ."

ಸ್ವಾಂತರಚನೆ....ಆ ಸುದ್ದಿ ಬೇರೆ. ಅವರ ಒಂದೇ ಒಂದು ಕವನವನ್ನು ಪರಿಶಿಷ್ಟ ದಲ್ಲಿ ಕೊಡಲಾಗಿದೆ. ನಮ್ಮಲ್ಲಿ ಕವಿತೆ, ಕಾವ್ಯವಾಚನ ಆಸಕ್ತಿಗಳು ಹೆಚ್ಚುತ್ತಿವೆ. ಒಂದು ವಿಷಯವನ್ನು ಸ್ಥಾಪಿಸಲು ಕಾಂತ್ರಿಕವಾಗಿ ಮೂರು ಉದಾಹರಣೆಗಳು ಸಾಕಲ್ಲವೆ.

ಪರಿಶಿಷ್ಟ

ಪದ್ಯ-

ಹಳ್ಳದ ನೀರು
ಕಲ್ಲು, ಚುಬಿಟ್ಟಾ।
ಸೇರಿ ಆದವು
ಬೆಳ್ಳನೆ ಬಟ್ಟೆ॥

ಟೀಕು:

ನಮ್ಮ ಜೀವನದ ಅತ್ಯಂತ ತಾತ್ವಿಕ ಕ್ಷಣಗಳಲ್ಲಿ ಶನಿವಾರದ ಮಧ್ಯಾಹ್ನ ಅನರ್ಘ್ಯವಾದುದು. ಅಂದು ಮಧ್ಯಾಹ್ನ ಹಳ್ಳದ ದಂಡೆಯಲ್ಲಿ ತೊಟ್ಟಬಟ್ಟೆಗಳನ್ನು ತೆಗೆದು ಟವೆಲ್ ಉಟ್ಟು ಬೀಡಿಹಚ್ಚಿಕೊಂಡು ಕುಳಿತುಕೊಳ್ಳುವುದು ನಂತರ ನಿಧಾನವಾಗಿ ಬಟ್ಟೆತೊಳೆದು ಒಣಹಾಕಿ ಬೀಡಿ ಹಚ್ಚಿಕೊಂಡು ದಂಡೆಯ ಲಂಟಾನದನೆರಳಿನಲ್ಲಿ ವಿಶ್ರಮಿಸುವುದು. ನಮ್ಮಶ್ರಮಕ್ಕೆ ಪ್ರತಿಫಲವಾಗಿ ಬೆಳ್ಳನ್ನ ಬಟ್ಟೆ ಬಿಸಿಲಿನಲ್ಲಿ ಗರಿಗರಿಯಾಗುತ್ತಿರುವಾಗ ಮೈತೊಳೆದು ಒದ್ದೆಪಂಚೆಯೊಂದನ್ನು ನೆತ್ತಿಗೆ ಹಾಕಿಕೊಂಡು ಒಣಗಿದ ಬಟ್ಟೆಗಳನ್ನು ಹೇಗಲಿಗೇರಿಸಿ ಬೀಡಿಹಚ್ಚಿಕೊಂಡು ಸಾವಕಾಶವಾಗಿ ಮನೆಯ ಕಡೆ ಹೊರಡುವುದು. ಇದೊಂದು ರಿಚುವಲ್ ಅತ್ಯಂತ ಭಕ್ತಿಪೂರ್ಣವಾಗಿ, ಭಾವುಕವಾಗಿ, ಗಾಂಭೀರ್ಯಯುಕ್ತವಾಗಿ ಆಚರಿಸುವವರು ಅಶ್ವಮೇಧಫಲವನ್ನು ಪಡೆದವರೆಂತಲೇ ನಮ್ಮ ಮಿತ್ರವರ್ಗದ ನಮ್ರ ಅಭಿಪ್ರಾಯ.

ಸಂಸ್ಕೃತ ನಗೆಹನಿ

ಭಿಕ್ಷೋಮಾಂಸ ನಿಕ್ಷೇವಣಂ ಪ್ರಕುರುಕ್ಷೆ ಕಿಂತೇನ ಮದ್ಯಂ ವಿನಾ ಮದ್ಯಂ ಚಾಪಿ ತವಪ್ರಿಯಂ ಪ್ರಿಯಮಹೋ ವೇಶ್ಯಾಂಗನಾಭಿಃ ಸಹ ವೇಶ್ಯಾ ದ್ರವ್ಯರುಚಿಃ ಕುತಸವಧನಂ? ದ್ಯೂತೇನ ಚೌರ್ಯೇಣವಾ ಚೌರ್ಯ ದ್ಯೂತಪರಿಗ್ರಹೋಽಪಿ ಭವತೋ? ಭ್ರಷ್ಟಸ್ಯ ಕಾನ್ಯಾಗತಿ:

ಭೋಜಿರಾಜಿ: ಅಯ್ಯಾಸಂನ್ಯಾಸಿ, ಇದೇನು, ನೀನು ಮಾಂಸವನ್ನೂ ತಿನ್ನುವೆಯಾ?

ಸಂನ್ಯಾಸಿ : ಮದ್ಯವಿಲ್ಲದ ಬರಿಯ ಮಾಂಸದಿಂದ ಏನು ಪ್ರಯೋಜನ?

ರಾಜ : ಓ, ನಿನಗೆ ಮದ್ಯವೂ ಇಷ್ಟವೋ?

ಸಂನ್ಯಾಸಿ : ಹೌದು ಸೂಳೆಯರಸಂಗವಿದ್ದಾಗ ಮದ್ಯವೂ ಇಷ್ಟ!

ರಾಜ : ಅಲ್ಲಯ್ಯಾ, ಸೂಳೆಗೆ ಹಣದ ಆಶೆ. ನಿನಗೆಲ್ಲಿಯದಪ್ಪ ಹಣ?

ಸಂನ್ಯಾಸಿ : ಹಣಕ್ಕೇನು ಕೊರತೆ. ಜೂಜು ಕಳ್ಳತನ ಇರುವಾಗ?

ರಾಜ : ಹಾಗಾದರೆ ನೀನು ಜೂಜು ಕಳ್ಳತನವನ್ನೂ ಕೈಗೊಂಡಿರುವೆಯೋ?

ಸಂನ್ಯಾಸಿ : ಭ್ರಷ್ಟನಿಗೆ ಇನ್ನೇನುಗತಿ?

ಜ್ಞಾನೋದಯ

ಶಿವಕುಮಾರ್.

ಎಲ್ಲಿ ಹೋದರು ಎಲ್ಲ ಈ ಯಂತ್ರ ಕ್ಷೇತ್ರದಲ್ಲಿ?
ಏತಕೀ ನೀರವತೆ ಪಾರಮಧ್ಯದಲ್ಲಿ?

ಯಂತ್ರಗಳ ಘೋರ್ಗರೆತ, ಲಾರಿಗಳ ಚೀರಾಟ
ಪಿಷ್ಟಿನಾ ಕಾರ್ಮಿಕರ ಕ್ಯಾಂಟೀನ ಪರದಾಟ
ಏನೊಂದು ಕಾಣದೂ, ಎಲ್ಲವೂ ಸ್ತಬ್ಧ
ಯಾವಕಾರಣದಿಂದ ಈ ಘನನಿಶ್ಯಬ್ಧ

ನ್ಯೂಟ್ರಾನು ಬಾಂಬಿದರೇ? ನಾಯಕರು ಅಗಲಿದರೇ?
ಅಥವಾ ಒಮ್ಮೆಲೇ ಎಲ್ಲಬಂದ್ ಎಂದು ತೆರಳಿದರೇ?
ಇಲ್ಲ ಒಂಟಿ ಮೇಲಿನಾ ಕೊನೆಹುಲ್ಲಿನೆಸಳಂತೆ
ಮಾಲಿಕರ ಸಾಲ ಹೊರೆ ತುದಿ ಮುಟ್ಟಿತೇ?

ಈ ಎಲ್ಲ ಚಿಂತೆಗಳ ಭಾರದಿಂದಲಿ ಬಗ್ಗಿ
ಹುಣಸೆಮರದಡಿ ನಿಂತಿರಲು ನಾನು
ಭೋದಿಯಾಯಿತು ಹುಣಸೆ! ಮಿಂಚಿತು ಜ್ಞಾನ

ಇಂದು ಬೆಳಗಿನ ಪಾಳಿ ವಿದ್ಯುತ್ತು ಕಡಿತ!

ಬಾತುಕೋಳಿ ಸವಾರಿ

ಅವನು ಧನಿಕ, ಆದರೆ ಜಿಪುಣ. ಒಂದು ದಿನ ಅವನ ಮನೆಗೆ ಅವನ ಹಳೆಯ ಗೆಳೆಯ ಬಂದ.

"ಅಯ್ಯೋ ನೀನು ತುಂಬಾ ಅಪರೂಪಕ್ಕೆ ಬಂದಿದಿಯಾ. ನಮ್ಮ ಮನೆಯಲ್ಲೇ ಊಟ ಮಾಡಿಕೊಂಡು ಹೋಗು ಅನ್ನುತ್ತಿದ್ದೆ. ಆದರೆ ಅಡಿಗೆಗೆ ಇವತ್ತು ಏನೂ ಸಾಮಾಗ್ರಿ ಇಲ್ಲದ ಹಾಗೆ ಆಗಿದೆ."

ಅತಿಥಿ ಉತ್ತರಿಸಿದ. "ಪರವಾಗಿಲ್ಲ, ನಾನು ಹೇಗೂ ಕುದುರೆ ಮೇಲೆ ಬಂದಿದ್ದೇನೆ. ಅದರ ಮಾಂಸದಲ್ಲೇ ಸಾರುಮಾಡಿಸು"

"ಕುದುರೆ ಇಲ್ಲದೆ ನೀನು ಹೇಗೆ ಅಷ್ಟುದೂರ ವಾಪಾಸ್ ಹೋಗುತ್ತಿ ?"

"ಏನೂ ತೊಂದರೆಯಿಲ್ಲ. ನಿನ್ನ ಅನುಮತಿಯೊಡನೆ ಈಗತಾನೇ ನಾನು ನೋಡಿದ ದೊಡ್ಡ ಬಾತುಕೋಳಿಯ ಮೇಲೆ ನಾನು ವಾಪಸ್ ಹೋಗಬಲ್ಲೆ. ನೀನೇನೂ ಯೋಚನೆ ಮಾಡಬೇಡ"

ನಮ್ಮ ಮೂರ್ತಿಗೆ ಮ್ಯಾನೇಜರ್‌ಗಿರಿಗೆ ಬಡ್ತಿ ಸಿಕ್ಕಾಗಿನಿಂದ ಮ್ಯಾನೇಜ್‌ಮೆಂಟ್ ತರಬೇತಿ ಅಥವಾ ಲೀಡರ್‌ಷಿಪ್ ಟ್ರೈನಿಂಗ್ ಎಂದರೆ ಎಲ್ಲಿಲ್ಲದ ಹುಚ್ಚು. ಅಂದು ಸಂಜೆ ಅವನು ಸಿಕ್ಕಾಗ ನೇರವಾಗಿ ಈ ವಿಷಯ ಶುರುಮಾಡಿದ.

"ನೋಡು ಶಿವು ! ನಾಳಿದ್ದು ವೆಸ್ಟ್‌ಎಂಡ್‌ನಲ್ಲಿ ಒಂದು ದಿನದ ಮ್ಯಾನೇಜ್‌ಮೆಂಟ್ ಶಿಬಿರ ಇದೆ. ಅದನ್ನು ನಡೆಸಿಕೊಡುವವರು ಅತ್ಯಂತ ಪ್ರತಿಭಾನ್ವಿತ ಪ್ರಾಧ್ಯಾಪಕರಾದ ಪ್ರೊಫೇಸರ್ ಭಾಸ್ಕರನ್ ಅವರು ಕೆನಾಡದಿಂದ ಬಂದಿದ್ದಾರೆ. ಭಾರತೀಯ ಸಂಜಾತರು ಅವರು ಕಳೆದ ಹತ್ತು ವರುಷಗಳಿಂದ ಕೆನಡಾದಲ್ಲಿದ್ದು, ಧುರೀಣ ತರಬೇತಿ, ವಾಣಿಜ್ಯದಲ್ಲಿ ಕುಶಲತೆ, ಈ ವಿಷಯುಗಳಲ್ಲಿ ಹೆಚ್ಚಿನ ಪರಿಶ್ರಮ ಪಡೆದಿದ್ದಾರೆ. ನೀನು ಖಂಡಿತ ನನ್ನ ಜೊತೆ ಈ ಶಿಬಿರಕ್ಕೆ ಬಂದರೆ, ನಿನಗೆ ಈ ತರಬೇತಿಯ ನಿಜವಾದ ಪ್ರಯೋಜನ ತಿಳಿಯುತ್ತದೆ. ಆಮೇಲಾದರೂ ಮ್ಯಾನೇಜ್‌ಮೆಂಟ್ ವಿಜ್ಞಾನ ವೆಂದರೆ ಮೂಗೆಳೆಯುವ ನಿನ್ನ ಚಾಳಿ ತಪ್ಪಬಹುದು".

ಸರಿ! ಏನೋ ಗಾದೆ ಹೇಳಿದ ಹಾಗೆ, ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು ದಿನವೆಲ್ಲಾ ಕೊರೆತವನ್ನನುಭವಿಸಬೇಕಾಗುತ್ತದಲ್ಲಪ್ಪಾ ಎಂದು ಕೊಂಡು,

"ಅದು ಸರಿ ಮೂರ್ತಿ! ವೆಸ್ಟ್ ಎಂಡ್ ಹೊಟೇಲ್. ಅಂದಮೇಲೆ ಪ್ರವೇಶಧನ ನೂರೂ ರೂ ಗಳಷ್ಟಾದರು ಇದ್ದೇ ಇರುತ್ತದೆ. ನನಗೆ ಅಷ್ಟು ಖರ್ಚುಮಾಡಲು ಸದ್ಯಕ್ಕೆ ಸಾಧ್ಯವಿಲ್ಲ ವಲ್ಲಾ" ಎಂದು ನುಣುಚಿಕೊಳ್ಳಲು ಯತ್ನಿಸಿದೆ. ಪ್ರಯೋಜನವಾಗಲಿಲ್ಲ.

"ಅದೇನೂ ಯೋಚನೆಮಾಡಬೇಡ ಮರಿ, ನಾನಾಗಲೇ ನಮ್ಮಿಬ್ಬರಪರವಾಗಿ ಇನ್ನೂರು ರೂ ಕೊಟ್ಟು ಶಿಬಿರದಲ್ಲಿ ಸ್ಥಳ ಕಾದಿರಿಸಿದ್ದೇನೆ. ಆಮೇಲೆ ನೀನು ನನಗೆ ಹಣ ಕೊಟ್ಟರಾಯಿತು, ಮೂರ್ತಿ ತಪ್ಪಿಸಿಕೊಳ್ಳುವುದಕ್ಕೆ ಬಿಡಲಿಲ್ಲ. "ಆಯಿತು, ಬರುತ್ತೇನೆ ಶಿಬಿರದ ಮುಖ್ಯವಿಷಯ ಏನು?" ಎಂದು ಕೇಳಿದೆ. "ಹಣಗಳಿಕೆಗೆ ಅತ್ಯಂತ ಸುಲಭವಾದ ವಿಧಾನ ಮತ್ತು ವಾಣಿಜ್ಯ ಕೌಶಲ್ಯ ಎಂಬುದರ ಬಗ್ಗೆ ತರಬೇತಿ ಇದೆ. ಈ ವಿಷಯದಲ್ಲಿ ಪ್ರೊಫೆಸರ್ ಭಾಸ್ಕರನ್ ಅವರು ತಜ್ಞರೆಂದು ಖ್ಯಾತಿಇದೆ" ಮೂರ್ತಿ ಬಲು ಭಕ್ತಿ ಭಾವದಿಂದ ನುಡಿದ.

ಈ ತರಬೇತಿ ಶಿಬಿರಗಳ ವಿಷಯ ನನಗೇನೂ ಹೊಸದಲ್ಲ. ಯಾವ ಶಿಬಿರದಲ್ಲೂ ಪಾಲ್ಗೊಳ್ಳದಿದ್ದರೂ' ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಒಂದಲ್ಲಾ ಒಂದುಶಿಬಿರದ ಸಂಗತಿ

ಬರುತ್ತಲೇ ಇರುತ್ತದೆ. ಹಲವನ್ನು ರಾಷ್ಟ್ರೀಯ ನಿರ್ವಹಣಾ ಸಂಸ್ಥೆಯವರು ಏರ್ಪ ಡಿಸಿದ್ದರೆ, ಇನ್ನು ಕೆಲವು ಅತ್ಯಂತ ಚತುರ ಹಾಗೂ ಪ್ರತಿಭಾನ್ವಿತ ನಿರ್ವಹಣಾ ತಜ್ಞ ರೆಂದು ತಮ್ಮನ್ನುತಾವೇ ಕರೆದುಕೊಳ್ಳುವ ಆಸಾಮಿಗಳು ನಡೆಸುವ ಶಿಬಿರಗಳು. ವಿಷಯಗಳು ಬೇರೆ ಬೇರೆಯಾದರೂ, ಈ ಎಲ್ಲ ಶಿಬಿರಗಳಿಗೆ ಸಾಮಾನ್ಯವಾದ ಹಲವು ಅಂಶಗಳಿರುತ್ತವೆ. ಒಂದು ಶಿಬಿರ ನಡೆಯುವ ಸ್ಥಳ ಪಂಚತಾರಾ ಹೊಟೇಲು. ಎರಡು ಪ್ರವೇಶಧನ. ಒಂದು ದಿನದ ಶಿಬಿರಕ್ಕೆ ನೂರು ರೂ ಗಳಿಂದ ಹಿಡಿದು ನಾಲ್ಕು ದಿನಗಳ ಶಿಬಿರಕ್ಕೆ ಎರಡುಸಾವಿರ ರೂ. ವರೆಗೂ ವಿವಿಧ ಬಗೆಯ ಶಿಬಿರಗಳು. ಶಿಬಿರಗಳನ್ನು ಪ್ರಚಾರಗೊಳಿಸುವ ಜಾಹೀರಾತುಗಳಂತೂ ಬಲು ಮೋಜಿನ ಸಂಗತಿ. ಹಲವು ನಿರ್ವ ಹಣಾ ಚಾತುರ್ಯವನ್ನು ಕೇವಲ ಒಂದು ದಿನದಲ್ಲಿ ಕಲಿಸುವ ಆಶ್ವಾಸನೆಕೊಟ್ಟರೆ, ಇನ್ನು ಕೆಲವು ನಾಲ್ಕೇದಿನಗಳಲ್ಲಿ, ನಿಮ್ಮನ್ನು ಅತ್ಯಂತ ಚತುರನಾದ ನಿರ್ವಹಣಾ ತಜ್ಞ ನನ್ನಾಗಿ ಪರಿವರ್ತಿಸುವುದೇ ಅಲ್ಲದೇ, ಕ್ಷಿಪ್ರ ನಿರ್ಧಾರಣಾಶಕ್ತಿ, ಆತ್ಮವಿಶ್ವಾಸ ಹಾಗೂ ಕಾರ್ಯೋತ್ಸಾಹ, ಜನಸಂಪರ್ಕದಲ್ಲಿ ಪರಿಣತಿ ಕೌಟುಂಬಿಕ ಸೌಖ್ಯ, ಇವೇ ಮೊದಲಾಗಿ ಏನೇನೋ ದೊರಕಿಸುವ ಭರವಸೆ ನೀಡುತ್ತವೆ. ಶಿಬಿರ ನಡೆಯುವದಿನ ಮೂರ್ತಿ ಬೆಳಗ್ಗೆಯೇ ನಮ್ಮ ಮನೆಗೆ ಬಂದು ನನ್ನನ್ನು ವೆಸ್ಟ್ಎಂಡ್‌ಗೆ ಕರೆದೊಯ್ದ.

ಭವ್ಯವಾದ. ಸಭಾಂಗಣ ಪಂಚತಾರಾ ಅಂತಸ್ತಿಗೆ ತಕ್ಕಂತೆ ಸುಸಜ್ಜಿತವಾದ ವೇದಿಕೆ, ಧ್ವನಿವರ್ಧಕ, ಭದ್ರಪೀಠಗಳು ಇತ್ಯಾದಿ. ನಮ್ಮಂತಹ ಸುಮಾರು ಇನ್ನೂರು ಜನ ಅಲ್ಲಿ ಸೇರಿದ್ದರು. ಅಲ್ಲಲ್ಲೇ ಗುಂಪು ಗುಂಪಾಗಿ ನಿಂತು ಮೆಲುದನಿಯಲ್ಲಿ ಮಾತನಾ ಡುತಿದ್ದರು ಹನ್ನೊಂದು ಘಂಟೆಗೆ ಸರಿಯಾಗಿ ಪ್ರೊಫೆಸರ್ ಭಾಸ್ಕರನ್ ಆಗಮನ. ಚಿಕ್ಕ ಮೈಕಟ್ಟಿನ ಕುಳ್ಳ ಆಸಾಮಿ.ಸುಮಾರು ಮೂವತ್ತೈದು ವಯಸ್ಸಿರಬಹುದು. ದಟ್ಟ ವಾದ ಕರಿಯ ಗಡ್ಡ, ಹೊರವಾದ ಕೇಶರಾಶಿ, ಡಾರ್ಕ್‌ಸೂಟು.ಎಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ಭಾಸ್ಕರನ್ ಭಾಷಣಕ್ಕಾರಂಭಿಸಿದರು. ಅವರ ಕೆನಡಿಯನ್ ಇಂಗ್ಲೀಷ್ ಕನ್ನಡಕ್ಕಿಂತ ಮಲಯಾಳಂ ಹೆಚ್ಚು ಹತ್ತಿರವಾಗಿತ್ತು. ಭಾಷಣದ ವಿಷಯ 'ವಾಣಿಜ್ಯ ಕೌಶಲ್ಯ ಮತ್ತು ತ್ವರಿತಲಾಭ'

ನಾನು ಮೂರ್ತಿಗೆ ಪಿಸುಮಾತಿನಲ್ಲಿ ಹೇಳಿದೆ "ಮೂರ್ತಿ, ಈ ಭಾಷಣಕಾರ ನನಗೆ ಹಳೆಯ ಪರಿಚಿತ. ಮಾಂಟ್ರಿಯಲ್ ಒಲಿಂಪಿಕ್ಸ್ ನಡೆಯುವಾಗ ಜೇಬಿನಲ್ಲಿದ್ದ ಹಣ ಪಿಕ್-ಪಾಕೇಟ್‌ನಿಂದ ಮಾಯವಾಯಿತೆಂದು ಹೇಳಿ ನನ್ನಿಂದ ಹತ್ತು ಡಾಲರ್ ಕೈಗಡ ತೆಗೆದುಕೊಂಡಿದ್ದ.

"ತ್ವರಿತವಾಗಿ ಲಾಭಗಳಿಸುವುದು ಬಲು ಸುಲಭ. ಉದಾಹರಣೆಗೆ ಭಾಸ್ಕರ ನನ್ನೆ ತೆಗೆದುಕೋ. ಕಳೆದ ಶುಕ್ರವಾರವೇ ಇವನು ಇಲ್ಲಿಗೆ ಬಂದ. ನನ್ನ ಹತ್ತಿರ ಬಂದಾಗ ಆ ಹತ್ತು ಡಾಲರ್ ಸುದ್ದಿ ಮರೆತೇ ಬಿಟ್ಟಿದ್ದ."

"ಇವನಿಗೆ ಐನೂರು ರೂ. ಬಂಡವಾಳ ಸಾಕು. ಐನೂರು ರೂ. ಕೊಟ್ಟು ದಿನಪತ್ರಿಕೆಯಲ್ಲಿ ಒಂದು ಜಾಹಿರಾತು ಹಾಕಿಸಿದ. ಅದನ್ನು ನೋಡಿದ ಇನ್ನೂರು ಜನ ನಿನ್ನಂಥವರು, ತಲಾ ನೂರು ರೂಪಾಯಿ ಕೊಟ್ಟು ಇಲ್ಲಿಗೆ ಬಂದಿರಿ. ಇಪ್ಪತ್ತು ಸಾವಿರ ಆದಾಯ, ಹಣಗಳಿಕೆ ಎಷ್ಟು ಸುಲಭ !" ಮೂರ್ತಿ "ಅರೇ........" ಎಂದ.

ಭಾಸ್ಕರನ್ ಭಾಷಣವನ್ನು ಹತ್ತು ನಿಮಿಷ ಕೇಳಿ ಹೊರಕ್ಕೆಬಂದೆ. ಕಾರ್ ಒಳಗೆ ಕುಳಿತುಕೊಳ್ಳುವ ವೇಳೆಗೆ, ಮೂರ್ತಿಯು ನನ್ನನ್ನು ಹಿಂಬಾಲಿಸಿದ.

ನಾನೇನು ಕಡಿಮೆಯಲ್ಲ

ಆ ಊರಿನ ಧನಿಕ ತನ್ನ ಐಶ್ವರ್ಯದ ಬಗೆಗೆ ತನ್ನ ದಾನಶೂರತೆಯ ಬಗೆಗೆ ಜಂಬಕೊಚ್ಚಿಕೊಳ್ಳಲು ಒಂದು ಅವಕಾಶವನ್ನೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವನು ಒಂದು ದಿನ ತನ್ನ ತಂದೆಯ ತಿಥಿಯ ಸಂಧರ್ಭದಲ್ಲಿ ಊಟಕ್ಕೆ ನೆಂಟರು, ಸ್ನೇಹಿತರನ್ನು ಆಹ್ವಾನಿಸಿದ್ದ. ಅಂದಿನ ವಿಶೇಷಕ್ಕಾಗಿ ಒಂದು ಕೊಬ್ಬಿದ ಹಂದಿ ತಂದು ಮನೆಯ ಮುಂದೆ ಕಟ್ಟಿದ್ದ, ಆದರೆ ಅದನ್ನು ಕಡಿಯುವ ವೇಳೆ ಬಂದಾಗ ಅದು ಎಲ್ಲೊ ತಪ್ಪಿಸಿಕೊಂಡು ಓಡಿದೆ ಎಂದು ತಿಳಿಯಿತು. ಧನಿಕ ಹಂದಿ ಹುಡುಕಿಕೊಂಡು ಹೊರಟಾಗ ಎದುರಿಗೆ ಒಬ್ಬ ಅಪರಿಚಿತ ಕಾಣಿಸಿದ. ಧನಿಕನಿಗೆ ತನ್ನ ಬಡಾಯಿ ತೋರಿಸಲು ಇದೂ ಒಂದು ಅವಕಾಶ ಕೇಳಿದ. 'ಸ್ವಾಮಿ ಇವತ್ತು ನಮ್ಮ ಮನೆಯಲ್ಲಿ ತುಂಬಾ ವಿಶೇಷ ಅಡಿಗೆ. ಅವಕ್ಕೆ ಬಹಳ ಜನರನ್ನು ಕರೆದಿದ್ದೇನೆ, ಈ ಪ್ರಾಂತ್ಯದಲ್ಲೇ ಇಲ್ಲದ ಹಂದಿ ಅದಕ್ಕಾಗಿ ತಂದಿದ್ದೆ. ಅದು ಎಲ್ಲೋ ತಪ್ಪಿಸಿಕೊಂಡು ಹೋಗಿದೆ. ಈ ಕಡೆ ನೀವೇನಾದರೂ ನೋಡಿದಿರಾ.

ಆ ಹೊಸಬ ಬಡಾಯಿಯಲ್ಲಿ ಇವನಿಗಿಂತ ಏನೂ ಕಡಿಮೆಯಲ್ಲ, ಉತ್ತರಿಸಿದ. ನಾನು, ಈಗ ನೀವು ನೋಡುತ್ತಿರುವ ತುಂಬಾ ಬೆಲೆಯ, ಅತ್ಯುತ್ತಮ ಬಟ್ಟೆಯ, ಪ್ರಖ್ಯಾತ ದರ್ಜಿ ಹೊಲೆದಿರುವ ಈ ಸೂಟ್ ಹಾಕಿಕೊಂಡಾಗಿನಿಂದ ಯಾವ ಹಂದಿಯನ್ನೂ ನೋಡಿಲ್ಲ.

ಮನೆದೇವರೆಂದರೂ ಒಂದೇ, ಮನೆ ವೈದ್ಯರೆಂದರೂ ಒಂದೇ ಎಂದು ನಂಬಿದ ಕಾಲ ಒಂದಿತ್ತು. ಆದರೆ ಇಂದು.... ದೇವರು ಕಲ್ಲಾಗಿದ್ದಾರೆ.... ವೈದ್ಯರು ಡಾಕ್ಟರ್ ಆಗಿದ್ದಾರೆ ... ಜಂಟಿ ಫ್ಯಾಮಿಲಿಗಳು ಯುನಿಟರಿ ಫ್ಯಾಮಿಲಿಗಳಾಗಿವೆ....ಕಾಲಗತಿಸಿದಂತೆ ಪ್ರಕೃತಿ ಪರಿಸರ, ವಸ್ತುಸ್ಥಿತಿ ಬದಲಾಯಿಸಿದಂತೆ, ಮನೆ ಡಾಕ್ಟರರ ಬಗ್ಗೆ ನಮ್ಮ ಕಲ್ಪನೆ ಸಹ ಮಾರ್ಪಾಡಾಗಿದೆ.... ಈಗಿನ ಪರಿಸ್ಥಿತಿಯಲ್ಲಿ ಮನೆ ಡಾಕ್ಟರರೆಂದರೆ ವಿವರಣೆ ಇಷ್ಟು ಸಾಕು. ಚಿಲ್ಲರೆ ದೈಹಿಕ ಅಥವಾ ಮಾನಸಿಕ ಅನಾರೋಗ್ಯವನ್ನು ಚೆನ್ನಾಗಿ ಪಾಲಿಸಿ, ಪೋಷಿಸಿ, ಬೆಳೆಸಿ, ಸಾಯಂಕಾಲದೊಳಗೆ ವಾಸಿಯಾಗುವ ಬೇನೆಯನ್ನು, ಮೂರು ದಿನಕ್ಕೂ ಹೆಚ್ಚು ಮುಂದೂಡಿ, ತನಗೆ ಅತೀ ಸೀರಿಯಸ್ ಖಾಯಿಲೆಯಾಗಿತ್ತು ಎಂದು ರೋಗಿಗೆ ಕಲ್ಪನೆ ಮೂಡಿಸುವ ವ್ಯಕ್ತಿಗೆ ಮನೆ ಡಾಕ್ಟರು ಎಂದು ಕರೆಯಬಹುದು....

ದುರಾದೃಷ್ಟವಶಾತ್, ಮನೋ ವೈದ್ಯನಾದ ನನಗೆ ಮನೆ ಡಾಕ್ಟರರಾಗುವ ಸುಯೋಗವಿಲ್ಲ.... ಆತ್ಮೀಯ ಗೆಳೆಯರೊಬ್ಬರ ಮದುವೆಗೆ ಹೋಗಿದ್ದೆ.... ಗಂಡು ಇಂಜಿನೀಯರ್, ಯೋಗ್ಯ ಸಂಭಾವಿತ, ವ್ಯವಹಾರ ಜ್ಞಾನದ ಕೊರತೆಯಿದೆ ಅಷ್ಟೆ. ಅರತಕ್ಷತೆಗೆ ಹೋಗಿ ಶುಭಾಶಯವನ್ನು ಕೋರಿದಾಗ ಪ್ರೀತಿಯಿಂದ ತನ್ನ ಹೆಂಡತಿಗೆ ಪರಿಚಯಿಸಿದ.... "ಇವರು ಡಾ|| ಪೈ, ಮನೋರೋಗ ತಜ್ಞರು, ನಮ್ಮ ಫ್ಯಾಮಿಲಿ ಡಾಕ್ಟರ್" ಹುಡುಗಿಗೆ ಎದೆ ಬಡಿತ ತಪ್ಪಿರಲು ಸಾಕು ... ಅವಳಪ್ಪನ ಪ್ರಜ್ಞೆ ತಪ್ಪದೆ ಇದ್ದುದು ಅಲ್ಲಿದ್ದವರ ಪುಣ್ಯ ವಿಶೇಷ.... ಫ್ಯಾಮಿಲಿ ಡಾಕ್ಟರ್ ಆಗುವ ಸೌಭಾಗ್ಯವಿರಲಿ ರಸ್ತೆ ಮೇಲೆ ಸಿಕ್ಕಿದರೆ ಪರಿಚಯವುಳ್ಳವರೂ ಕಂಡು ವಂದಿಸಲಾಗದಂತಹ ವೃತ್ತಿ ವಿಶೇಷ ನನ್ನದು. ಇದೇ ರೀತಿ ದೌರ್ಭಾಗ್ಯ ಶಾಲಿಗಳೆಂದರೆ ಚರ್ಮರೋಗ ತಜ್ಞರು ಅವರನ್ನು ಯಾರೂ ಫ್ಯಾಮಿಲಿ ಡಾಕ್ಟರ್ Categeryಗೆ ಸೇರಿಸಿಕೊಳ್ಳುವುದಿಲ್ಲ. ಸೇರಿಸಿಕೊಂಡರೂ ಹೇಳಿಕೊಳ್ಳುವುದಿಲ್ಲ....

ಮನೆ ಡಾಕ್ಟರಾಗಲು ಬಹಳಷ್ಟು ಕನಿಷ್ಟ ಅರ್ಹತೆಗಳು ಮುಖ್ಯ.... ನೆಗಡಿ, ಶೀತ, ವಾತ, ವಾಂತಿ-ಭೇಧಿ, ಫ್ಲೂ ಇದ್ದ ಸಂದರ್ಭವಲ್ಲಿ ಮನೆ ವೈದ್ಯರ ಪಾತ್ರ ದೊಡ್ಡದು ... ಸ್ಟೇತಸ್ಕೋಪ್ ಎದೆಯ ಮೇಲಿಟ್ಟು.... ಕಣ್ಣು ಮಿಟುಕಿಸದೆಯೇ, ಗಂಭೀರ ಮುಖ ಭಾವವನ್ನು ಪ್ರದರ್ಶಿಸಿ, ನಂತರ ಹಾರಿಕೆಯ ಮಾತಿನಲ್ಲೇ ರೋಗವನ್ನು ತೇಲಿಸಿ ಬಿಡುವ ಚಾತುರ್ಯವಂತೂ ಅವರಿಗೆ ಬೇಕು. ನಾಡಿ ನೋಡುವಾಗ, ಎದೆ ಬಡಿತವನ್ನು ಆಲಿಸುವಾಗ, ಬಿ. ಪಿ. ಆಪರೇಟಸ್ಸಿನ ಪಂಪನ್ನು ಒತ್ತುವಾಗ,

ಅವರ ಮುಖ ಭಾವವನ್ನು ರೋಗಿ ಗಮನಿಸಿದರೆ, ಅವನ ರಕ್ತದ ಒತ್ತಡ ಹಲವಾರು ಪಾಯಿಂಟಿನ ಏರನ್ನು ತೋರಿಸುವುದು ಸಹಜ. ಮದ್ದು ಕೊಡುತ್ತಾರೆ (Prescription ಕೊಡುವುದು ಕಡಿಮೆ).... ಇಂಜೆಕ್ಷನ್ ಚುಚ್ಚುತ್ತಾರೆ...ಮನೆಯೊಡತಿ ಕೊಟ್ಟ ಸಕ್ಕರೆ ಹಾಕಿದ ಹಾಲನ್ನು ಕುಡಿಯುತ್ತಾರೆ. ಮುಂದಿನ ಮೂರು ದಿನದಲ್ಲಿ ಖಾಯಿಲೆ ವಾಸಿ.... ಗೆಳೆಯರೊಬ್ಬರು ಸ್ವಾರಸ್ಯವಾಗಿ ನನಗೆ ಒಮ್ಮೆ ಹೇಳಿದರು.... Family doctor treatment ಅಂದರೆ ಏನು ಗೊತ್ತೇನಯ್ಯ....ಅವರು ಟ್ರೀಟ್ ಮಾಡುವ ರೋಗಗಳು....ಚಿಕಿತ್ಸೆ ಕೊಟ್ಟರೆ ಏಳು ದಿನದಲ್ಲಿ ವಾಸಿಯಾಗುತ್ತದೆ....ಚಿಕಿತ್ಸೆ ಇಲ್ಲದಿದ್ದರೂ ಒಂದು ವಾರದಲ್ಲಿ ವಾಸಿ ಆಗ್ತದೆ....ಹೀಗಿದೆ ಅವರ ಚಿಕಿತ್ಸಾಕ್ರಮ.

ಹೊಸದಾಗಿ ಕಾಲೇಜಿಂದ ಪಾಸಾಗಿ ಬಂದ ಎಳಸು ಡಾಕ್ಟರುಗಳು ಫ್ಯಾಮಿಲಿ ಡಾಕ್ಟರರಿಂದ ಕಲಿಯುವುದು ಸಾಕಷ್ಟಿದೆ....ಒಂದು ಉದಾಹರಣೆ.... ನಮ್ಮ ಮನೆ ವೈದ್ಯರ ಮಗ ಡಾಕ್ಟರ್ ಪರೀಕ್ಷೆ ಪಾಸಾಗಿ ಬಂದ.... ತಂದೆ ಆರ್.ಎಂ.ಪಿ. ಆದರೆ ಮಗ M.B.B.S. ತಂದೆ ಬೇರೆಯೂರಿಗೆ ಹೋದ ಸಂದರ್ಭದಲ್ಲಿ ತಂದೆಯ ದವಾಖಾನೆಯನ್ನು ನಾಲ್ಕು ದಿನ ಸ್ವಂತವಾಗಿ ನಡೆಸಿದ. ತಂದೆ ಮರಳಿ ಬಂದೊಡನೇ ಹೆಮ್ಮೆಯಿಂದ ಹೇಳಿಕೊಂಡ...."ನೋಡಿ ಆ ಪೇಶಂಟ್ ಇಲ್ಲವೇ ಡ್ಯಾಡಿ, ಅಸ್ತಮಾ ಕೇಸು.... ನೀವು ಎರಡು ವರ್ಷದಿಂದ ಚಿಕಿತ್ಸೆ ಕೊಡುತ್ತಿದ್ದೀರಿ.... ನಾನು ಅವನನ್ನು ಮೂರೇ ದಿನದಲ್ಲಿ ವಾಸಿ ಮಾಡಿದ್ದೇನೆ....ನೋಡ್ತಿರೇನು ?"

ತಂದೆಯ ಪ್ರತಿಕ್ರಿಯೆ ಸ್ವಾರಸ್ಯಕರ...."ಅಯ್ಯೋ ಮುಟ್ಠಾಳ, ಯಾವ ಕಾಯಿಲೆಯೋ ಆಗಲಿ ಹಂತ ಹಂತವಾಗಿ ವಾಸಿಮಾಡಬೇಕು ಮಗಾ, ಅದರಿಂದ ಇಬ್ಬರಿಗೂ ಒಳಿತು....ಆತನನ್ನು ಎರಡು ವರ್ಷ ನಾನು ತಳ್ಳದಿದ್ದರೆ, ನಿನ್ನನ್ನು ಡೊನೇಷನ್ ಕೊಟ್ಟು ಖಾಸಗೀ ಮೆಡಿಕಲ್ ಕಾಲೇಜಿನಲ್ಲಿ ಓದಿಸಲಿಕ್ಕೆ ಆಗ್ತಿತ್ತೆನೋ ಮೂರ್ಖ?"

ಮನೆ ಡಾಕ್ಟರ್‌ರಿಂದ ಇನ್ನೂ ಕೆಲವು ಖಚಿತವಾದ advantages ಇವೆ. 'Cash today, Credit tomorrow' ಮನೋಭಾವ ಮನೆ ಡಾಕ್ಟರರಿಗಿಲ್ಲ ಬೇಕಾದಾಗ .... ಸಾಕಾದಾಗ.... ಜೋರಾದಾಗ ಔಷಧಿಯನ್ನು ತೆಗೆದುಕೊಂಡು, ನಂತರ ಕಂತಿನಲ್ಲಿ ಅಥವಾ ಒಟ್ಟಿಗೆ ರಿಯಾಯಿತಿ ಕೋರಿ ಫೀಸನ್ನು ಕೊಡಬಹುದು.... ಒಂದು, ಎರಡು, ನಾಲ್ಕು ದಿನ ಪ್ರವಾಸ ಮಾಡಿ, ವೈಯಲ್ಲಿ ಆರೋಗ್ಯವಿಲ್ಲದೇ ಆಫೀಸಿಗೆ ಹಾಜರಾಗಲು ಸಾಧ್ಯವಾಗಲಿಲ್ಲ ಎಂಬ ಮೆಡಿಕಲ್ ಸರ್ಟಿಫಿಕೇಟ್ ಕೊಡಲು ಮನೇ ಡಾಕ್ಟರೇ ಅರ್ಹರು, ರೋಗ ತಜ್ಞರ ಪರೀಕ್ಷೆಗಾಗಿ, ತೆಗೆದುಕೊಳ್ಳುವ ಅಪಾಯಿಂಟ್‌ಮೆಂಟ್ ಗೊಂದಲವಿಲ್ಲಿ.... ಕ್ಯೂನಲ್ಲಿ ಕಾಯಬೇಕಾಗಿಲ್ಲ....Home visitಗೆ

ಪರದಾಡಲು ಪಡುವ ಆವಶ್ಯಕತೆಯಿಲ್ಲ. ನಿಮಗೆ ಅನುಕಂಪವೂ ಸಿಗುತ್ತದೆ....ನಿಮ್ಮ ರೋಗಭ್ರಮೆಗೆ....ಗೌರವವು ಸಿಗುತ್ತದೆ ಮನೆ ಡಾಕ್ಟರರಿಂದ ಇನ್ನೂ ಒಂದು ಅನುಕೂಲತೆಯುಂಟು.. ವೆಟರ್ನರಿ ಡಾಕ್ಟರುಗಳಿಲ್ಲದ ಊರುಗಳಲ್ಲಿ....ನಿಮ್ಮ ಮುದ್ದಿನ ಪ್ರಾಣಿ, ಗಿಳಿ ಬೆಕ್ಕು. ನಾಯಿ ಅಥವಾ ಮನೆಲ್ಲಿರುವ ಎತ್ತು, ಎಮ್ಮೆ. ದನಕ್ಕೆ ಇರುಸುಮುರುಸಾಗಿದ್ದರೆ....ಮನೆ ಡಾಕ್ಟರರು ಚಿಕಿತ್ಸೆಗೆ ಸಹಾಯ ಮಾಡುವುದಂತೂ ಖಚಿತ ...

ಸರಿ ....ನಾನೂ ಪದವೀಧರನಾದ ಕೂಡಲೇ ಕೆಲಕಾಲ Practise ಮಾಡಿದ್ದು ಮನೆ ಡಾಕ್ಟರ್ ಆಗುವ ಸಂದರ್ಭ ಬಂದಿತ್ತು.... ಇವತ್ತು ಅಜ್ಜಿಗೆ ಗೂರಲು, ನಾಳೆ ಮೊಮ್ಮಗಳಿಗೆ ವಾಂತಿ ಭೇದಿ.... ಮೂರು ದಿನಗಳ ನಂತರ ಅಮ್ಮನಿಗೆ ಜ್ವರ ಹಾಗೂ ನಿರಂತರ ತಲೆನೋವು.... ಹೀಗೆ ನಾಲ್ಕಾರು ಬಾರಿ. ಸಕ್ಕರೆಯಿಲ್ಲದ ಕಹಿ ಕಾಫಿ, ಪೋಸ್ಟ್ ಆಫೀಸ್ ಗೋದಿನಂತಹ ಉಪ್ಪಿಟ್ಟು ಸೇವಿಸಿದೆ....ಒಮ್ಮೆ ಊಟಕ್ಕೂ ಹೋಗಿ ಬಂದೆ. ಹದಿನೈದು ದಿನದ ನಂತರ ತಂದೆಗೆ ಸಖತ್ ಖಾಯಿಲೆ, ತಲೆಸುತ್ತು ಬಂದು ಬಿದ್ದು ಬಿಟ್ಟಿದ್ದಾರೆ....ಕೂಡಲೇ ಬರಬೇಕು ಎಂಬ ಕರೆ ಬಂತು....ಹೋಗಿ ನೋಡಿದೆ. ನಾಡಿ, ಎದೆಬಡಿತ, ಬಿ.ಪಿ. ಎಲ್ಲವೂ ನಿಯಮಿತ ಕ್ರಮದಲ್ಲಿದೆ....ಏನಾದರೂ family worries ಇದೆಯೋ ಕೇಳಿದೆ....“ಹೌದು ಸಾರ್ .. ನನಗೆ ಮಗಳಿದ್ದಾಳೆ ನೋಡಿ.... ಎಸ್.ಎಸ್.ಎಲ್.ಸಿ. 2nd attempt ಇ.ಪಿ.ಎಸ್.....ಈಗ 25 ವರ್ಷವಾಯ್ತು, ಮದುವೆಗೆ ಎಲ್ಲೂ ಸೆಟ್ ಆಗ್ತಾಯಿಲ್ಲಾ.... ನೀವು ನಮ್ಮವರೇ, ಗೋತ್ರವೂ ಸೆಟ್ಟಾಗುತ್ತೆ.... ನಿಮ್ಮ objection ಇಲ್ಲದಿದ್ದರೆ.... ನಿಮ್ಮ ಪೇರೆಂಟ್ಸ್ ಹತ್ರಾ ಮಾತಾಡ್ತೀನಿ ಆಗಬಹುದಾ?” ಎಂದರು.

"I do not say that figures lie but liars can figure"

C. North cope parkinson.

ಎಂ. ನನ್ನ ಕೈಹಿಡಿದು ಎಳೆದುಕೊಂಡು ಬಸ್ ಸ್ಟಾಪಿನತ್ತ ಬಂದ. ಒಂದು ಲಾರಿ ಸಿಕ್ಕಿತು. ಹತ್ತಿಕೊಂಡು ಮರಳಿ ಬರುವಾಗ ದಾರಿಯುದ್ದಕ್ಕೂ ಎಂ.ನ ಆರ್ಥಿಕ ಜಿಜ್ಞಾಸೆ, ವಿಶ್ಲೇಷಣೆಗಳು ನಡೆದಿತ್ತು.

(ಸಶೇಷ)

"ಜರ್ಮನ್ ಫಿಲಾಸಫರ್ ಕಾರ್ಲ್ ಜಾಸ್ಟರೆನ ಕನಸು ಇಂದು ನಮ್ಮ ನಾಡಿನಲ್ಲಿ ಜನಪ್ರಿಯವಾಗುತ್ತಿರುವುದು ಸಂತೋಷವೇನೋ ಸರಿ...."

"ಪ್ರಚಾರ ಒಂದು ಅದ್ಭುತ ಅಸ್ತ್ರ, ಸಾಧನ, ವಿಧಾನ, ಮಾರ್ಗ. ಆದರೆ ಆಧಾರ ವಿಲ್ಲದೆ, ಬೆಂಬಲವಿಲ್ಲದೆ ಯಾವ ವಿಷಯವೂ ಮಾನ್ಯತೆ ಪಡೆಯಲಾರದು. ಜಟಿಲ ವಾಗುತ್ತಿರುವ ಇಂದಿನ ಬದುಕಿನಲ್ಲಿ ಸತ್ಯವೂ ಕೂಡ ಪ್ರಚಾರವನ್ನವಲಂಬಿಸಬೇಕಾಗು ತ್ತದೆ. ಸತ್ಯ ತನ್ನಲ್ಲಿ ಸತ್ವವಿದೆ, ತಾನೇ ಸ್ವತಃ ಸತ್ಯವಾದ್ದರಿಂದ ಜಯ ಗ್ಯಾರಂಟಿ ಎಂದು ತೆಪ್ಪಗೆ ಕೂಡುವಂತಿಲ್ಲ. ಸತ್ಯಮೇವ ಜಯತೆ ಎಂಬ ನಾಣ್ಣುಡಿ ತನ್ನಷ್ಟಕ್ಕೆ ತಾನೇ ಸತ್ಯವಾಗಿ ಪರಿಣಮಿಸುವ ಪರಿಸ್ಥಿತಿ ಇಂದು ಇಲ್ಲ. ಪ್ರಚಾರದ ಹಂಗಿಲ್ಲದ ಸತ್ಯ ಮೂಲೆ ಗುಂಪಾಗುವುದರಲ್ಲಿ ಸಂಶಯವಿಲ್ಲ...."

ಆದರೆ ಅಸತ್ಯವೂ ಪ್ರಚಾರವನ್ನವಲಂಬಿಸಿದರೆ ಗತಿ ?

"Competition, my boy, Competition ಗಾಂಧಿ ಏನು ಹೇಳಿ ದರು.? "

"I mean, M.K. Gandhi if you please ಸತ್ಯವಂತನಾಗಿದ್ದರಷ್ಟೇ ಸಾಲದು ಸತ್ಯವಂತ ಜಾಗರೂಕನೂ ಆಗಿರಬೇಕು, ಜಾಗರೂಕನೂ ಆಗಿರಬೇಕೆಂದರೆ compete ಮಾಡಬೇಕು ಎಂದು ಅರ್ಥವಲ್ಲವೆ? ಅದಕ್ಕೆ ಪ್ರಚಾರ ಅವಶ್ಯಕವಲ್ಲದೇ? ನಾವೂ ಅದನ್ನೆ ತಾನೇ ಮಾಡುತ್ತಿರುವುದು ?"

"ನಾವು ಬರೀ ಪ್ರಚಾರ ಮಾಡುತ್ತಿದ್ದೇವೆ."

"ನೀನೊಬ್ಬ ಸಿನಿಕ' ಪ್ರಚಾರದ ಭರದಲ್ಲಿ ಅಲ್ಲೊಂದು ಇಲ್ಲೊಂದು ಸತ್ಯಗಳು ಮಿಂಚಬಹುದಲ್ಲವೆ? ನಾವು ಆಶಾವಾದಿಗಳಾಗಿರಬೇಕು. ಈಗ ನೋಡು, ನಮ್ಮ ದೇಶದಲ್ಲಿ ಎಷ್ಟು ಜನ ಬಡವರಿದ್ದಾರೆ ಗೊತ್ತೆ? 1971 ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ 600,000,000 ಎಂದಿಟ್ಟು ಕೊಳ್ಳೋಣ, ಆದರಲ್ಲಿ ದಾರಿದ್ರ್ಯ ರೇಖೆಯ ಕೆಳಗೆ ತಮ್ಮ ಹೆಸರುಗಳನ್ನ ನೊಂದಾಯಿಸಲು ಆರ್ಹತೆ ಪಡೆದವರ ಸಂಖ್ಯೆ 339 ಮಿಲಿಯನ್ ಈ ದರಿದ್ರ ಗಣತಿ 79-80 ರಲ್ಲಿ ನಡೆಯಿತು. ಅಂದರೆ ಆ ವೇಳೆಗೆ ಒಟ್ಟು ಜನಸಂಖ್ಯೆ ಮಿಲಿಯನ್ ಮೀರಿತ್ತೆಂದು ಧಾರಾಳವಾಗಿ ಭಾವಿಸುವದರಲ್ಲಿ ಬಾಧಕವೇನೂ ಇಲ್ಲವಷ್ಟೆ? ಅಂದರೆ

We can reasonably presume that the number of those below the poverty line according to the '71 census was much below 50 percent of the total population of the sub continent. ಆದರೆ,1981 ರ ಸೆನ್ಸಸ್ ಪ್ರಕಾರ ನಮ್ಮ ಜನಸಂ ಖ್ಯೆ to Put it in sound figures' 685·185 millions. But with a view to cheering up the general public and not to scare them, we shall retain the 77 78 figures as for as the number of those below the poverty line is concerned' which will compare favourably with the total of 685.185 millions of the blessed 81 ceusus.

ಆದ್ದರಿಂದ, ದಾರಿದ್ರ್ಯರೇಖೆಯ ಕೆಳಗಿರುವವರ ಸಂಖ್ಯೆ 87-78 ಕಿಂತ 81 ರಲ್ಲಿ ಕಮ್ಮಿಯಾಗಿದೆಯೆಂದು ನಾವು ರಾಜಾ ರೋಷವಾಗಿ ಹೇಳುವುದರಲ್ಲಿ ರಾಷ್ಟ್ರೀಯ ಗೌರವದ ರಹಸ್ಯ ಅಡಗಿದೆ ಎಂಬುದರಲ್ಲಿ ನಿನಗೇನಾದರೂ ಸಂಶಯವಿದೆಯ? 81 ರ ಸೆನ್‌ಸ್ ಆಧಾರದ ಮೇಲೆ 81-82 ರಲ್ಲಿ ಇದ್ದ ಕಡು ಮತ್ತು ಅತಿ ಬಡವರ ಸಂಖ್ಯೆ 282 ಮಿಲಿಯನ್ ಎಂದು 79-80 ರ ಅಂದಾಜಿನಿಂದ ಹೇಳಬಹುದು. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ...."

ಪೆಚ್ಚಿನ ತರಲೆ ನನಗೇಕೆ ಎಂದುಕೊಂಡು, "ಉಹೂಂ....ಬಿಲ್‌ಕುಲ್" ಎಂದೆ ಅಂಕಿ ಅಂಶಗಳ ಗೊಂಡಾರಣ್ಯ

"ದಿನಕ್ಕೆ ಸರಾಸರಿ 2400 ಕ್ಯಾಲೋರಿಯ ಆಹಾರವನ್ನು ಕಬಳಿಸುವ ಸರಾಸರಿ ಜನರ ಮಾನಸಿಕ ಆದಾಯದ ಮಧ್ಯಬಿಂದುವನ್ನು ನಾವು ದಾರಿದ್ರ್ಯರೇಖೆಯ

ಗಡಿಯೆಂದು ಪರಿಗಣಿಸಿದಾಗ' ನಗರ ಪ್ರದೇಶಗಳ 2100 ಕ್ಯಾಲೊರಿ ನುಂಗುವ ಜನ ಗಳನ್ನೂ ನಾವು ಮರೆಯುವಂತಿಲ್ಲ. ಈ ಜನ ಕೆಲವು ವಿಟಮಿನ್‌ಗಳನ್ನೂ ನುಂಗುತ್ತಾ ಬಂದಿದ್ದಾರಲ್ಲ ಎಂದು ನೀನು ಅಪಸ್ವರ ಎತ್ತಬಹುದು. ಕ್ಯಾಲೋರಿಯ ಪರಿಗಣನೆ ಯಲ್ಲಿ ವಿಟಮಿನ್ ಸೇರುವುದಿಲ್ಲವೆಂದು ನನ್ನ ವೈಯಕ್ತಿಕ ಭಾವನೆ ಇರುವುದರಿಂದ ನಿನ್ನ ಸಂಶಯ ನಿರ್ಧಾರ ಈಗಾಗಲೇ ಹೇಳಿದ ಮಧ್ಯಬಿಂದು, ಮಾಸಿಕ ವರಮಾನದ ಮೀಡಿ ಯನ್, ಗ್ರಾಮೀಣ ಪ್ರದೇಶಗಳಲ್ಲಿ 49 ರೂಪಾಯಿ ಐದು ಪೈಸೆ, ಹಾಗೂ ನಗರ ಪ್ರದೇಶಗಳಲ್ಲಿ 54 ರೂಪಾಯಿ 64 ಪೈಸೆ ಎಂದು 1973-74 ರ ಅಂಕಿ ಅಂಶಗಳಿಂದ ಸಿದ್ಧವಾಗಿದೆ. ಕಮ್ಮಿ ಮಧ್ಯಬಿಂದು ಮಾಸಿಕ ಆದಾಯದ ಹಳ್ಳಿಜನ ಹೆಚ್ಚು ಮಧ್ಯ ಬಿಂದು ಮಾಸಿಕ ಆದಾಯ ವುಳ್ಳ ಪಟ್ಟಣದ ಜನಗಳಿಗಿಂತ ಹೆಚ್ಚಿನ ಕ್ಯಾಲೋರಿಗಳನ್ನು ಹೇಗೆ ದೊರಕಿಸುತ್ತಿದ್ದಾರೆಂಬ ಬಗ್ಗೆ ಕುತುಹಲಿಗಳು ಸಂಶೋಧನೆ ನಡೆಸಬೇಕಾಗಿದೆ ಇರಲಿ, 1973-74ರಲ್ಲಿ ರೂಪಾಯಿಯ ಬೆಲೆ 19 ಪೈಸೆ ಇತ್ತೆಂದು ನೆನಪು. 81ರ ಜನಗಣತಿ ಮಾಸಿಕ ವರಮಾನ GNP, balance of payments ರಾಜ್ಯಗಳ ಓವರ್ ಡ್ರಾಫ್ಟ್ ವೇತನಗಳ ಹೆಚ್ಚಳ ತುಟ್ಟಿಭತ್ಯದ ಏರಿಕೆ, fiat money ಮುದ್ರ ಣದ ಹೆಚ್ಚಳ fluctnations in exchange rates ಆಂತರಿಕ ಮಾರುಕೆ ಟ್ಟೆಯ ಪಲ್ಲಟಗಳು rate of interest includiug DIR ಅಭಿವೃದ್ಧಿ ಸಾಲ ಗಳು ಸಾರ್ವತ್ರಿಕಗೆ ಮತ್ತು ಪ್ರಚಾರಾಂದೋಳನಗಳ ಫಲವಾಗಿ ಮೀಡಿಯನ್ ಮೌಲ್ಯ ! I mean of monthly per capita income ಗ್ರಾಮೀಣ ಪ್ರದೇಶಗಳಲ್ಲಿ 76 ರೂಪಾಯಿಗೂ, ನಗರ ಪ್ರದೇಶಗಳಲ್ಲಿ 88 ರೂಪಾಯಿಗಳಿಗೂ ಹೆಚ್ಚಿರುವುದು ಅಭಿವೃದ್ಧಿಯನ್ನು ಸೂಚಿಸುವುದಿಲ್ಲವೆ? ಈ ಅಂಕಿ ಅಂಶಗಳು 1979-80ಕ್ಕೆ ಸಂಬಂಧಿಸಿದೆವು,ಆದ್ದರಿಂದ 81ರ ಸೆನ್ಸಸ್ ಪ್ರಕಾರ Mutatis mutandis ಪುನರ್‌ವಿಮರ್ಶೆಯಾಗಬೇಕು ಎಂದು ಯಾರಾದರೂ ಹೇಳಬಹುದು ಹೇಳಲಿ ಹುಲಿ ಎಂದರೆ 1984ರಲ್ಲಿ ದಾರಿದ್ರ್ಯ ನಿವಾರಣಾ ಯೋಜನೆಗಳಲ್ಲಿ ತೊಡಗಿಸಲು ನಾವು ಎಷ್ಟು ಹಣ ಖರ್ಚು ಮಾಡಿದ್ದೇವೆ ಗೊತ್ತೆ ? 80 ರಿಂದ 84ರ ವರೆಗೆ ಐ.ಆರ್.ಡಿ. ಪಿ.ಯಲ್ಲಿ 1352 95 ಕೋಟಿ ರೂಪಾಯಿ ಮತ್ತು ಎನ್. ಆರ್. ಇ.ಪಿ.ಯಲ್ಲಿ 28. 061.19ಕೋಟಿ ರೂಪಾಯಿಗೆ 19 ಪೈಸೆಯಂತೆ 1973-74ರ ಅಂಕಿ ಅಂಶಗಳ ಪ್ರಕಾರ ಈ ಬಂಡವಾಳದ ನಿಜವಾದ ಮೌಲ್ಯ ಎಷ್ಟೆಂದು ಲೆಕ್ಕ ಹಾಕಿದಾಗ ಸಿಗುವ 561-2238 ಕೋಟಿಯನ್ನು 1981ರ ಜನಗಣತಿಯ 685 ಚಿಲ್ಲರೆ ಮಿಲಿಯನ್‌ಗ ಳಲ್ಲಿ ದಾರಿದ್ರ್ಯ ರೇಖೆಯಿಂದ ಕೆಳಗಿರುವ ಸಂಖ್ಯೆಗಳಿಗೆ ಹಂಚಿದರೆ, ಉಂಟಾಗುವ ಉತ್ಪಾದನಾ ಮೌಲ್ಯವನ್ನು 84 ರ ರೂಪಾಯಿ ಮೌಲ್ಯ ಮತ್ತು ಹಣದುಬ್ಬರದ ದರದೊಂದಿಗೆ ತಾಳೆಹಾಕಿದಾಗ ಅಸಲಿ ಉತ್ಪಾದನೆ ಎಷ್ಟು ಹೆಚ್ಚಾಯಿತೆಂದು ಕರಾರು ವಾಕ್ಕಾಗಿ ಹೇಳಬಹುದು. ಐದು ಮಿಲಿಯನ್ ಡಾಲರ್ ಸಾಲದ ಮೊದಲೆರಡು ಕಂತು

66.666 ಪೊತ್ತದಿಂದ ದೇಶದ ಒಟ್ಟಾರೆ ಉತ್ಪಾದನಾ ಚಟುವಟಿಕೆಗಳ ಮೇಲಾದ ಪರಿಣಾಮವನ್ನು ಒತ್ತಟ್ಟಿಗಿಡೋಣ. Base year 1961ರ ಬೆಲೆ ಸೂಚ್ಯಂಕ ಹಾಗೂ ಜೀವನ ಮಟ್ಟದ ಸೂಚ್ಯಾಂಕಗಳನ್ನೂ ಅನುಕೂಲದ ವೃಷ್ಟಿಯಿಂದ ಕೈಬಿಟ್ಟಿದ್ದೇನೆ. ಇನ್ನು ಏಪ್ರಿಲ್ 1983ರ ವೇಳೆಗೆ 83-84ರ ಮುಂಗಡ ಅಂದಾಜಿನಂತೆ ಆಹಾರ ಧಾನ್ಯಗಳ ಉತ್ಪಾದನೆ 142ರಿಂದ 145 ಮಿಲಿಯನ್ ಟನ್ನುಗಳೂ, ಕೈಗಾರಿಕೋದ್ಯಮಿಗಳ ಉತ್ಪಾದನೆಯ ಹೆಚ್ಚಳ 82–83ರ 3.9 ರಿಂದ 6 ಗೂ ಮುಟ್ಟಿ ಉಳಿತಾಯ ಠೇವಣಿ ಸಂಗ್ರಹಣೆಯ ಮೊತ್ತ 82–83ರ 7100 ಕೋಟಿಯಿಂದ 83-84ರಲ್ಲಿ 8,000 ಕೋಟಿಯಾಗಲಿದ್ದು, ಜಿ.ಎನ್.ಪಿ. 6.5 ಅಧಿಕವಾಗಲಿದೆ.

ಎಲ್ಲಿಂದ ಎಲ್ಲಿಯವರೆಗೆ

ಇಷ್ಟೆಲ್ಲಾ ಹೆಚ್ಚಳದ ವಾತಾವರಣದಲ್ಲಿ ಸರಾಸರಿ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಮಾಸಿಕ ಮಧ್ಯಬಿಂದು ಆದಾಯದ ಹಾಗೂ ಕಾಲೋರಿ ಭಕ್ಷಣೆಯ ಲೆಕ್ಕಾಚಾರ ಪುನರ್ ಪರಿಷ್ಕೃತವಾಗಿ 85ರ ವೇಳೆಗೆ ಒಂದು rosy picture ನಿಕಲಾಯಿಸಬಹುದಲ್ಲವೆ? ಆನಂತರ ಬರುವ ಬಜೆಟ್ ಈ ಗುಲಾಬಿರಂಗಿಗೆ ಮತ್ತೂ ಮೆರಗು ಕೊಟ್ಟು ಇಡೀ ಉಪಖಂಡದ ಅಕ್ಷಾಂಶ ರೇಖಾಂಶಗಳ ಕಾಲ್ಪನಿಕ ಭೌಗೋಳಿಕ ರೇಖಾ ವಿಭಜನೆ ಮಾಯವಾಗಿ ಒಂದು ಅಖಂಡ ಚಿತ್ರಮೂಡಿ ಅರುಣಾಚಲದ ಈಶಾನ್ಯದಿಂದ ಕಾಶ್ಮೀರದ ವಾಯುವ್ಯದ ಗಡಿಯವರೆಗೆ ದಾರಿದ್ರ್ಯರೇಖೆ ಒಂದೇ ಧೀರ್ಘ ತೆಳುರೇಖೆಯಾಗಿ ಹರಿಯುವುದನ್ನು INSAT–1 B ಯ ಸೂಕ್ಷ್ಮಾತ್ಮಿ ಸೂಕ್ಷ್ಮ ಕ್ಯಾಮರಾಗಳು ಕೆಳಗಿರುವವರೆಲ್ಲಾ ವಾಸ್ತವವಾಗಿ ಅದರ ಮೇಲೆ ಬರುವಂತೆ ಗ್ರಹಿಸಿ ಮರಳಿ ನಮಗೆ ಕಳಿಸುವುದಿಲ್ಲವೆನ್ನುತ್ತೀಯಾ? ನನಗಿನ್ನು ತಡೆಯಲಾಗಲಿಲ್ಲ. ಹೀಗೇ ಬಿಟ್ಟರೆ ಎಂ. ನನ್ನನ್ನು ಖಂಡಿತ ಕೊಲೆ ಮಾಡುತ್ತಾನೆಂದು ಖಾತ್ರಿಯಾಗಿ, ಶುರುಮಾಡಿದೆ:

'ಜರ್ಮೇನ್ ಗ್ರೀಯರ್ ಅವರ ಅಭಿಪ್ರಾಯದಂತೆ ಜನಸಂಖ್ಯಾಸ್ಫೋಟದ ಥಿಯರಿ ಪಾಶ್ಚಾತ್ಯ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ಮೋಸಮಾಡಲು ಹುಟ್ಟಿಕೊಂಡ ಬುಲ್‌ಶೀಟ್ ಎಂದು ಭಾವಿಸಿದರೂ, ಈಗ 81ರ ಜನಗಣತಿ ಪ್ರಕಾರ ಸಿದ್ಧವಾಗಿರುವ ಅಂಕಿ ಅಂಶಗಳ ಪ್ರಕಾರ ಒಟ್ಟು ಜನಸಂಖ್ಯೆ in round figures 685 ಮಿಲಿಯನ್ 185 ಸಾವಿರ. ಅದರಲ್ಲಿ ಉತ್ಪಾದನಾ ಶಕ್ತಿ, ಇಚ್ಛೆ ಮತ್ತು ಸಾಮರ್ಥ್ಯವುಳ್ಳವರು ಎಷ್ಟುಮಂದಿ ಎಂದು ನಾವು ಸಹಜವಾಗಿ ಪ್ರಶ್ನಿಸಬಹುದು. ಇದರಲ್ಲಿ ಸೊನ್ನೆಯಿಂದ 4 ವರ್ಷಗಳ ಹಸುಗೂಸುಗಳು 94 ಮಿಲಿಯನ್ 580 ಸಾವಿರಯಾನೆ 9 ಕೋಟಿ 45 ಲಕ್ಷ 30 ಸಾವಿರ ಉಳಿದದ್ದು 590 ಮಿಲಿಯನ್ 655 ಸಾವಿರ,

ಇದರಲ್ಲಿ 5 ರಿಂದ 14 ವರ್ಷ ವಯಸ್ಸಿನ ಮಕ್ಕಳು 174 ಮಿಲಿಯನ್ 863 ಸಾವಿರ ಕಳಿ-ಉಳಿದಿದ್ದು 415 ಮಿಲಿಯನ್ 980 ಸಾವಿರ. ಇದರಲ್ಲಿ 60 ವರ್ಷಕಿಂತ ಹೆಚ್ಚು ವಯಸ್ಸಿನ 37 ಮಿಲಿಯನ್ 860 ಸಾವಿರ ಜನರನ್ನೂ ಕಳಿ ಉಳಿದ 55.2 ಶೆಕಡಾ ಆದ 37 ಕೋಟಿ 80 ಲಕ್ಷ ಐದುಸಾವಿರದಲ್ಲಿ ತಾತ್ವಿಕವಾಗಿ, ತಾಂತ್ರಿಕವಾಗಿ ಹಾಗೂ ವಂಶಪಾರಂಪರ್ಯವಾಗಿ ನಿರುದ್ಯೋಗಿಗಳಾಗಿರುವ 378 ಮಿಲಿಯನ್ 304ಸಾವಿರ 998 ಜನರನ್ನು ಬಿಟ್ಟರೆ ಕೇವಲ ಇಬ್ಬರು ಉಳಿಯುತ್ತಾರೆ. ಆ ಇಬ್ಬರಲ್ಲಿ ಒಬ್ಬನಾದ ನನಗೆ ನಿದ್ದೆ ಬರುತ್ತಿದೆ. ನಿನ್ನ ಆರೋಗ್ಯ ಹೇಗಿದೆ?'

ಎಂ' ಡ್ರೈವರನ ಬೆನ್ನು ತಟ್ಟಿ ಲಾರಿಯನ್ನು ನಿಲ್ಲಿಸಿ 'ನಾನು ನಡೆದುಕೊಂಡು ಬರುತ್ತೇನೆ' ಎಂದು ಹೇಳುತ್ತಾ ಕತ್ತಲಲ್ಲಿ ಮಾಯವಾದ ಇಡೀ ಆಕಾಶವೇ ನನ್ನ ತಲೆಯ ಮೇಲೆ ಕಳಚಿಬಿತ್ತು.

ವಿಯತ್ನಾಂ ಜೋಕುಗಳು

ಸಮಯ ಸ್ಫೂರ್ತಿ

ಒಬ್ಬಳು ಅತ್ತೆ. ಅವಳಿಗೆ ಸರಿಯಾದ ಸೊಸೆ. ಇಬ್ಬರಿಗೂ ಜಿಹ್ವಾ ಚಾಪಲ್ಯ ಆದರೆ ದೊಡ್ಡ ಕುಟುಂಬದ ಹೆಂಗಸರಾದ್ದರಿಂದ ಅದನ್ನು ಎಲ್ಲರ ಎದುರಿಗೂ ತೋರಿಸಿ ಕೊಳ್ಳಲು ಬಡಿವಾರ.

ಒಂದು ದಿನ ವಿಶೇಷ ಹಬ್ಬ. ಗಮಗಮ ವಾಸನೆಯ ಕೋಳಿಯ ಸಾರು ಸಿದ್ಧ ವಾಗಿದೆ. ಅದರ ರುಚಿ ನೋಡಲು ಸೊಸೆಗೆ ಕಾತುರ. ಯಾರೂ ನೋಡುತ್ತಿಲ್ಲದ ಸಮಯ ಸಾಧಿಸಿ, ಒಂದು ಬಟ್ಟಲು ಸಾರನ್ನು ತುಂಬಿಕೊಂಡು ಕುಡಿಯಲು ದೇವರ ಮನೆಯ ಒಳಗೆ ಹೋದಳು. ಆದರೆ ಅಲ್ಲಿ ಅತ್ತೆ ಇದೇ ಕೆಲಸ ಮಾಡುತ್ತಿದ್ದಾಳೆ.

"ಇಲ್ಲೇನು ಬಂದೆ" ಅತ್ತೆ ಗದರಿಸಿದಳು.

"ನಿಮಗೆ ಇನ್ನೊಂದು ಬಟ್ಟಲು ಸಾರು ಬೇಕಾಗಿತ್ತೇನೋ ಕೇಳೋಣ ಅಂತ ಬಂದೆ" ಎನ್ನುವ ನಮ್ರ ಉತ್ತರ ಸೊಸೆಯದು.

ಹಬ್ಬ-ಗಿಬ್ಬಗಳು

ಭೀಮನ ಅಮವಾಸ್ಯೆ ದಾಶರಥಿ ದೀಕ್ಷಿತ್

"ಭೀಮನವಮಾಸೆ ದಿನ ಮಾತ್ರ ಯಾಕೆ ಗಂಡ ಪೂಜೆ ಮಾಡಬೇಕು ? ನಮ್ಮ ಹೆಂಡಿರು ದಿನಾ ನಮಗೆ ಪೂಜೆ ಮಾಡುವುದು ಸಾಲದೇ ?"

–ಎಂಬ ಪ್ರಶ್ನೆಯನ್ನು ಕೋಳಿ ಕುಕ್ಕರ ಸಂಘದ ಅಧ್ಯಕ್ಷರು ಕೇಳುತ್ತಿದ್ದಾರೆ.

"ನಮ್ಮ ಜಮಾನ್ರುಗಳು–ಭೀಮಕಾಯ –' ಅಮಾಸೆ ಕಲರ್‍ರು - ಭೀಮನಹಾಗೇ ಈ ದುಬಾರಿ ಕಾಲದಲ್ಲಿ ತಿಂದು ಹೆಂಡಿರನ್ನು ಕಾಡಿಸುವಾಗ ಅದರ ವಾರ್ಷಿಕೋತ್ಸವವಾಗಿ ಆಚರಿಸೋದೇ ಭೀಮನಮಾಸೆ ದಿನದ ವಿಶೇಷ ಗಂಡನ ಪೂಜೆ."

-ಎಂದು ನಿತ್ಯ ಗಂಡನ ಪೂಜೆ ಮಾಡುತ್ತಿರುವ "ಸ್ತ್ರಿ ಸಮಾನತೆ" ಸಂಘದ ಸರಸಮ್ಮನೋರು ಹೆಳಿದ್ದಾರೆ.

* * *

ವಟ ಸಾವಿತ್ರಿ ಹುಣ್ಣಿಮೆ.

"ವಟ ಸಾವಿತ್ರಿ ವ್ರತದ" ವಿಶೇಷವೇನು ಎಂದು ನಮ್ಮ ವಿಶೇಷ ವರದಿಗಾರರು ಸಾವಿತ್ರಮ್ಮನವರನ್ನು ಸಂದರ್ಶನದಲ್ಲಿ ಕೇಳಿದರು.

"ಈ ಕಾಲದಲ್ಲಿ ನಿತ್ಯ ಒಂದಲ್ಲ ಒಂದು ಯಮಗಂಡಕಾಲ ಇರುತ್ತೆ ನೋಡಿ-ಡಬ್ಬಿಗೆ ತಿಂಡಿ ಹಾಕಿ ಕಪ್ಪು ತೀಡಿ, ದೇವರಿಗೆ ಅಡ್ಡ ಬಿದ್ದು ಹೋಗುವುದಕ್ಕೆ ದಾರಿ ಬಿಟ್ಟರೂ ನನಗೆ ಅಡ್ಡ ಬಿದ್ದು ಹೋಗುವ ನನ್ನ ಸತ್ಯವಾನ, ಬಹಳ ಸಾಧು, ಪಾಪ ಅದು ಹೇಗೆ ಈ ಬಿ. ಟಿ. ಎಸ್.ನಲ್ಲಿ ಕೆಲಸಕ್ಕೆ ಹೋಗಿ ಬರ್‍ತಾರೋ ನನ್ನ ತಾಳಿ ಪುಣ್ಯ ಅವರು ಮರಳಿ ಮನೆಗೆ ಬಂದಾಗ ಸತ್ಯವಾನ ಎದ್ದು ಯಮನ ಪಾಶರಿಂದ ಮರಳಿ ಬಂದ ಹಾಗೇ ಆಗುತ್ತೆ- ಈ ಯಮಗಳ ಕಾಟದ ವಾರ್ಷಿಕೋತ್ಸವವೇ ವಟಸಾವಿತ್ರಿ ಹುಣ್ಣಿಮೆ"

-ಎಂದರು ವಟ ವಟ ಸಾವಿತ್ರಿ.

ಉಗಾದಿ

'ಉಗಾದಿ' ಹಬ್ಬದ ವಿಶೇಷವೇನು? ಎಂದರು ಒಬ್ಬರು,

"ಒಂದಾನೊಂದು ಕಾಲದಲ್ಲಿ ಬೆಲ್ಲಅಂತ ದಂಡಿಯಾಗಿ ಮನೆಲಿ ತುಂಬಿರ್ತಾ ಇತ್ತು ಅದೆಲ್ಲಾ ಸಕ್ಕರೆ ಆಗಿ ಕೂತಿದೆ ಈಗ ಅದು ಸಾಮಾನ್ಯ ಬೆಲೆಅಲ್ಲ ಅದನ್ನುತಂದರೆ ಬೇವು ತಿಂದ ಅನುಭವಆಗುತ್ತೆ ಈಗ ಬೆಲ್ಲ ತಂದರೂ ಬೇವೇ ತಂದ ವ್ಯಥೆಆಗುತ್ತೆ, ಈ ವರ್ಷನು ವರ್ಷದ ಬೆಲ್ಲತರುವ ಬೇವಿನ ಯಾತನೆಯೇ ಉಗಾದಿ ಎಂಬ ವಾರ್ಷಿಕೋತ್ಸವ"

—ಎಂದರು ಸಂವತ್ಸರದ ಫಲಾ ಹೇಳೋಜೋಯಿಸರು.

* * *

ವಿಜಯದಶಮಿ

"ವಿಜಯದಶಿಮಿ ವಿಶೇಷವೇನು ಪಂಡಿತರೆ?"

-ಎಂದು ಕನ್ನಡ ಪಂಡಿತರನ್ನು ಕೇಳಲಾಯಿತು.

"ಊರ ಪುಡಾರಿ ದಾಂಧಲೆ ಹಾಕಿ—ಜನರನ್ನು ಬೊಳೈಸಿ—ಸಮಯ ಬಿದ್ದರೆ ಕತ್ತಿ—ಚೈನು ಉಪಯೋಗಿಸಿ—ತಕ್ಕಸಮಯದಲ್ಲಿ ಪಾರ್ಟಿ ಫಂಡಿನಿಂದ ರೊಕ್ಕಾ ಹಂಚಿ—ಗೆಲ್ಲುವದಿನವೇ ನಮ್ಮ ಗಲ್ಲಿಗೆ ವಿಜಯದಶಮಿ,

—ಎಂದರು ಪಂಡಿತರು ವಿಜಯದಶಮಿದಿವಸ ಕೂಡ ಸಿಹಿ ತಿನ್ನಲಾರದ ವ್ಯಥೆಯೊಡನೆ —ಅವರಿಗೆ ಸಕ್ಕರೆ ಖಾಯಿಲೆ.

* * *

ಸ್ವಾತಂತ್ರ ದಿನ

"ಸ್ವಾತಂತ್ರ್ಯದಿನ ಯಾವುದು?"

"ಎಂದು ಹೆಂಡ್ತಿ ತೌರಿಗೆ ಹೋಗಿ, ಅವಳು ಅಡಿಗೆ ಮನೆ ಭರಣಿಯಲ್ಲಿಟ್ಟ ಹಣ ಸಿಕ್ಕಿ—ನೆಚ್ಚಿನ ಬುಕ್ ಮಾಸ್ತರ ಗೆಳೆಯ ಗುಂಡಪ್ಪ ಮನೆಯಲ್ಲಿ ಸ್ವತಂತ್ರವಾಗಿ ಹಾಡ್ತಾ ಜಲಸಾ ಮಾಡ್ತಾನೋ ಅಂದೇ ಸ್ವತಂತ್ರದಿನ—ಅದೇನಿಜವಾದ ಆಚರಣೆ "ಎಂದ ಗುಂಡಪ್ಪನಗೆಳೆಯ.

ಶುಭಾಶಯಗಳೊಂದಿಗೆ—

ಡಿ ಎಂ ಎಂ ಪ್ರಿಂಟಿಂಗ್ ಇಂಕ್ಸ್ ಪ್ರೈವೇಟ್ ಲಿ.

ಜಿ-35, ರಾಮಕೃಷ್ಣ ಪುರಂ ಎಸ್. ಸಿ. ರಸ್ತೆ,
ಬೆಂಗಳೂರು-560 009.

ಶುಭಾಶಯಗಳೊಂದಿಗೆ -



ಡಿ. ಎಂ. ಮರಿಯಪ್ಪ ಅಂಡ್ ಸನ್ಸ್

ಪೇಪರ್ಸ್, ಬಾಕ್ಸ್ ಬೋರ್ಡ್ಸ್, ಪ್ರಿಂಟಿಂಗ್ ಇಂಕ್ಸ್
ಸುಲ್ತಾನ್‌ಪೇಟೆ,
ಬೆಂಗಳೂರು-560 053.

ದೀಪಾವಳಿ

"ದೀಪಾವಳಿಯ ವಿಶೇಷವೇನು?"

"ಅಳಿಯ ದೇವರು ಮನೆಗೆಬಂದು, ಮಡದಿ ತನ್ನಮಾತೆಯ ಮಡಿಲಿಗೆಸೇರಿ–ಭಾವಮೈದನನೇ ಗರೆ ಎಂದು ಆಕೊಳಕನ ನೆತ್ತಿ ಮೂಸಿಸುವ, ಅತ್ತೆಮನೆ ಅಳಿಯನಿಗೆ ಉಪಚಾರಮಾಡಿ ದಿವಾಳಿಆಗಿ–ಮಾವ ಪಟಾಕಿಯಾಗಿ ಅಳಿಯ ಬೆಂಕಿಕಡಿಯಾಗುವ ಹಬ್ಬವೇ ದಿವಾಳಿ–ಮಾವನಿಗೆ....

—ಎಂದ ಒಬ್ಬನೊಂದವಮಾವಯ್ಯ.

ರಿಪಬ್ಲಿಕ್ ದಿನ

"ರಿಪಬ್ಲಿಕ್ ದಿನಾಚರಣೆಮಾಡುವವರ್ಯಾರು?"

–ದೇಶದ ಅಧ್ಯಕ್ಷರು–ಪ್ರಧಾನಿಗೆ–ಆಕಾಶವಾಣಿ–ಕೆಂಪುಕೋಟೆ–ರಾಷ್ಟ್ರಧ್ವಜ ದೂರದರ್ಶನ —ವಿದ್ಯಾಇಲಾಖೆಯಎಲ್ಲಮಾಸ್ತರುಗಳು–ಮಿಠಾಯಿಮಾರಾಟಗಾರರು ಇವರುಗಳು ವಿಶೇಷವಾಗಿ ಆಚರಿಸುತ್ತಾರೆ—ಮಿಕ್ಕವರು ರಜಾಆಚರಿಸಿ ಉಂಡುಮಲಗುವರು.

ವನಮಹೋತ್ಸವ

"ವನಮಹೋತ್ಸವ ಎಂದರೇನು?"

"ಯಾರೋ ಪುಣ್ಯಾತ್ಮರು ಹಾಕಿದಗಿಡಕ್ಕೆ—ಪಾದರಸದ ವಿಷವಿಕ್ಕಿ ಅದು ಎಲೆ ಉದುರಿ—ಅಸ್ಥಿಪಂಜರದಂತೆ ಬರಡಾದಾಗ— ವಿಷವಿಕ್ಕಿದ ಘಾತುಕ ಕೊಡಲಿ ಪೆಟ್ಟಿಕ್ಕಿ, ಕಡಿದು ಸೌದೆಗಾಡಿಮಾಡಿ ಮಾರಿ—ಬಂದದುಡ್ಡಲ್ಲಿ ಮನೆಯಾಕೆಗೆ ರವಿಕೆ—ಕಾಲುಂಗುರ ತಂದು ಹಬ್ಬಮಾಡಿ ಸಂಜೆ ಬಂಡೆ ಎತ್ತುವ ಉತ್ಸವವೇ ವನಮಹೋತ್ಸವ"

—ಎಂದರು ಮನೆಮನೆ ಮುಂದಿದ್ದಮರದ ಅವಸಾನೋತ್ಸವ ಕಂಡ ಮುದುಕರೊಬ್ಬರು.

ನಕ್ಕದ್ದೇ ಹಬ್ಬ

"ಅವಳು ನಕ್ಕದ್ದೇ ಪಬ್ಬ- ಅವಳ ಸಿಂಡರಿಸಿ ಬಿಗಿಹಿಡಿದ ತುಟಿಅಗಲಿ ಮುಗುಳು ನಗೆ ನಕ್ಕದ್ದೇ ಉಗಾದಿ. ಅವಳು ಬೈಯ್ಯದೆ-ಸಿಡಿಮಿಡಿ ಗುಟ್ಟದೆ-ಪಾತ್ರೆ ಡಭ ಡಭ ಮಾಡದೆ ಹುಗ್ಗಿ ಬೆಲ್ಲ ಗೊಜ್ಜುಮಾಡಿದ ದಿನವೇ-ಗೌರಿ ಹಬ್ಬ-ಆಕೆ ಅಮಾಸೆ ಮುಖಕ್ಕೆ ಹುಣ್ಣಿಮೆ ಪೌಡರು ಸಿಂಪಡಿಸಿಕೊಂಡ ರಿಸೆಪ್ಷನ್ ಸೀರೆ ಉಟ್ಟು ಸಿನಿಮಾಕ್ಕೆ ಕರೆದು ಕೊಂಡು ಹೋದ ದಿನವೇ ನನಗೆ ಸಾತಂತ್ರ್ಯ ದಿನ-ಆವಳ ಸಿಡಿಮಿಡಿ ಮುಖ ಹೋಗಿ ಕುಡಿ ನೋಟ ಬೀರಿದ ದಿನವೇ ಭೋಗಿ ಹಬ್ಬ-ನನ್ನ ಸುಖ ಸಂಸಾರದ ಹಬ್ಬಗಳು ಬಹು ಅಪರೂಪಕ್ಕೆ ಬರುತ್ತವೆ. ನನ್ನ ಲಂಖಿಣಿ ಸಂಸಾರದಲ್ಲಿ

-ಎಂದವ ಕೋಳಿಕುಕ್ಕ ಸಂಘದ ಅಧ್ಯಕ್ಷ.

* * *

ಕಾಮನ ಹುಣ್ಣಿಮೆ

"ಕಾಮಣ್ಣನ ಹಬ್ಬದ ಐತಿಹೂವೇನು"

-ಎಂದ ಒಬ್ಬ ಬೀದಿ ಕಾಮಣ್ಣ.

"ನಿತ್ಯ ಕಾಮನ ಹಬ್ಬಕಣ್ರೋ-ಅದರ ಫಲವೇ 33 ಕೋಟಿ ಅಂತ ಅಂದು ಸತ್ತರು ನಮ್ಮವರ ಕವಿ ಬೇಂದ್ರೆ. ಅದು ಈಗ 73 ಕೋಟಿ-ಮಕ್ಕಳಿವರೇನಮ್ಮ ಆಗಿದೆ. ಹುಳದ ಹಾಗೆ ಬಿದ್ದು ಸಾಯ್ತಾರೆ ದಿನ ನಿತ್ಯ. ಹೆಣ್ಣು ಗಂಡು ಹೆಚ್ಚಿದಷ್ಟು ಈ ಹಬ್ಬ ನಡೆದದ್ದೇ-ಇದಕ್ಕೆಲ್ಲಿ ಕಡಿವಾಣ !

ಈ ಕೌರವ ನರಕದ ಜನಸಂಖ್ಯೆ ಹೆಚ್ಚಿದ ಈ ನಾಡಿನ ಜನ ತಮ್ಮ ಶೌರ್ಯದ ಕುರುಹಾಗಿ ವರ್ಷಕ್ಕೊಮ್ಮೆ ಆಚರಿಸುವುದೇ ಕಾಮಣ್ಣ ಕಟ್ಟಿಗೆ- ಭೀಮಣ್ಣ ಬೆರಣಿ. ತಿಳಿತೇ ?

-ಅಂದರು ಫ್ಯಾಮಿಲಿ ಪ್ಲಾನಿಂಗ್ ಆಫೀಸರಿಣಿ.

* * *

ಶ್ರೀ ರಾಮ ನವಮಿ

"ಶ್ರೀರಾಮ ನವಮಿ ಇವತ್ತು"

"ಅದಕ್ಕೆ ನಾನೇನು ಮಾಡ್ಲಿ...."

"ಕೋಸುಂಬ್ರಿ-ರಸಾಯನ-ಗೊಜ್ಜವಲಕ್ಕಿ-ನೀರು ಮಜ್ಜಿಗೆ-ಕೆಂಪು ಕಲ್ಸಕ್ರೆಪಾನಕ ಇವು ತಕ್ಷಣ ತಯಾರಾಗಬೇಕು-ಪೂಜೆಗೆ"

"ಪೂಜೆಗೋ-ನೈವಿದ್ಯಕ್ಕೋ...."

"ಪೂಜೆ ಆದಮೇಲೆ-ನಯವಾದ ವಿದ್ಯೆ"

"ಅದು ಸರಿ ಈ ತಿನಸುಗಳೇ ಯಾಕೆ ಈ ಪೂಜೆಯಲ್ಲಿ?"

"ಕಾಡಲ್ಲಿ ಆಂಜನೇಯ ಇತ್ಯಾದಿ ಕಪಿಗಳೂ-ಶಬರಿ ಮುಂತಾದ ಶಿಷ್ಯೆಯರೂ ಇದನ್ನು ರುಚಿಯಾಗಿ ಮಾಡಿ ಶ್ರೀರಾಮ ವನವಾಸದಲ್ಲೂ ಸುಖವಾಗಿರುದಂತೆ ಮಾಡಿದ್ದರು...."

"ನಿನ್ನ ವನವಾಸವಾಯ್ತೊ........ ?

''ರಾಮರಾಜ್ಯ ಮಾಡ್ತಿನಿ ಓಟುಕೊಡಿ ಅಂದು ಗದ್ದುಗೆಗೆಬಂದೆ-ಶರ್ತಿ ಮುಗೀತು ರಾಮರಾಜ್ಯ ಬರಲಿಲ್ಲ-ವದ್ದು ಓಡ್ಸಿದರು....ಕಾಡಿಗೆ ಹೋದೆ-ಈಗ ಶ್ರೀರಾಮಾಂತ ಮುಂದಿನ ಅವಕಾಶಕ್ಕಾಗಿ ಕಾಯ್ತಾ ಕಾಡಲ್ಲಿಯೇ ರಾಜಕೀಯ ಮಾಡ್ತಿದ್ದೀನಿ-ರಾಜಕೀಯ ನನ್ನ ಆಜನ್ಮ ಹಕ್ಕೂ....''

'' ಹಕ್ಕಿನ ಮಹತ್ವ ಈಗ ಆಯ್ತು ಬಂದ ಜನಕ್ಕೆ ಆಯ್ದವರು ತಡಿವಿಕೊಂಡು ತದುಕುತ್ತಿದ್ದಾರೆ....''

''ಅದಕ್ಕೆ ಈಗ ನಾನು ಬಹು ಹುಶಾರಿನಿಂದ ಬೇರೆಯುವರ ಖರ್ಚಿನಲ್ಲಿ ಶ್ರೀ ರಾಮನವಮಿ ಫಳಾರ ಮಾಡಸ್ತಾ ಇದ್ದೀನಿ- ಜೈಹಿಂದ್...."

ಅವನೂ ಅವಳ ಹಾಗೆ — **ಲೀಲಾ ಮಿರ್ಲೆ.**

ನಾನು ಎರಡು ಕಡಲೆಕಾಯಿ ಬೀಜನ ಬಾಯಿಗೆ ಹಾಕಿಕೊಂಡರೆ, ಒಂದೇ ಒಂದು ಹೊಟ್ಟೆಗೆ ಹೋಗ್ತಾ ಇದ್ದದ್ದು. ಇನ್ನೊಂದು ನೇರವಾಗಿ ದವಡೆ ಹಲ್ಲಿನ ತೂತಿನಲ್ಲಿ ಪಟ್ಟಾಗಿ ಕೂತುಬಿಡುತ್ತಿತ್ತು, ತೂತು ಅಷ್ಟು ದೊಡ್ಡದಾಗಿತ್ತು. ಸರಿ, ಬೇಗ ಹೋಗಿ ದಂತ ವೈದ್ಯರ ಹತ್ತಿರ ಹಲ್ಲು ರಿಪೇರಿ ಮಾಡಿಸಿಕೊಬೇಕು ಅಂದ್ಕೊಂಡೆ. ಹೋದ ಸಲಿ ಹೀಗೆ ಹುಳುಕಲ್ಲನ್ನು ಭರ್ತಿಮಾಡಿಸಿಕೊಳ್ಳಲು ಹೋದಾಗ ಡಾಕ್ಟರು ಹೇಳಿದ ಜೋಕ್ ಜ್ಞಾಪಕಕ್ಕೆ ಬಂತು. ಅಮೇರಿಕದಲ್ಲಿ ಒಬ್ಬಾಕೆ ದಂತವೈದ್ಯರ ಬಳಿ ಹೋದ ಳಂತೆ, ದವಡೆ ಹಲ್ಲಿನ ತೂತನ್ನು ಭರ್ತಿಮಾಡಿಸಲು ಡಾಕ್ಟರು ಆ ದೊಡ್ಡ ಕೊರಕ ಲನ್ನು ನೋಡಿ, "ಅಮ್ಮಾ, ನಿಮ್ಮ ಹಲ್ಲಿನ ತೂತು ಬಹಳ ದೊಡ್ಡದಾಗಿ ಬಿಟ್ಟಿದೆ" ಎಂದರಂತೆ. "ಹೌದು ಡಾಕ್ಟರೆ, ಅದಕ್ಕೆ ಬಂದೆ" ಎಂದಳಂತೆ ಆಕೆ. ಪುನಃ ಆತ "ಅಮ್ಮ, ನಿಮ್ಮ ಹಲ್ಲಿನ ತೂತು ಬಹಳ ದೊಡ್ಡದಾಗಿ ಬಿಟ್ಟಿದೆ" ಅಂದರಂತೆ, ಈತ ಹೇಳಿದ್ದನ್ನೇ ಹೇಳುವುದನ್ನು ಕೇಳಿ ಆಕೆಗೆ ಕೋಪ ಬಂದಂತೆ "ಏನ್ ಡಾಕ್ಟರೇ, ಹೇಳಿ ದ್ದನ್ನೆ ಹೇಳ್ತಿರಾ" ಅಂತ ಸ್ವಲ್ಪ ಬಿರುಸಾಗಿ ಹೇಳಿದಳಂತೆ. ಅದಕ್ಕೆ ಡಾಕ್ಟರು "ಇಲ್ಲಾ ಮ್ಮಾ, ನಾನು ಹೇಳಿದ್ದು ಒಂದೇ ಸಲ, ಎರಡನೆಯ ಸರ್ತಿ ನೀವು ಕೇಳಿದ್ದು, ನಿಮ್ಮ ಹಲ್ಲಿನ ತೂತಿನಿಂದ ಬಂದ ಪ್ರತಿಧ್ವನಿ" ಎಂದರಂತೆ !

ನನ್ನ ಹಲ್ಲಿನ ಪರಿಸ್ಥಿತಿಯನ್ನು ನೋಡಿ ಈ ಸರ್ತಿಯೂ ಈ ತರಹದ ಯಾವು ದಾದರೂ ಜೋಕನ್ನು ಹೇಳುತ್ತಾರೇನೋ ಅನ್ಕೊಂಡೇ ಡಾಕ್ಟರ ಶಾಪಿಗೆ ಹೋದೆ.

ಯಥಾಪ್ರಕಾರ ಕ್ಯೂ ದೊಡ್ಡದಾಗಿತ್ತು. ಒಂದು ಕಡೆ ಇಷ್ಟು ಹೊತ್ತು ಕ್ಯೂ ಕಾಯಬೇಕಲ್ಲಾ ಅಂತ ಅಸಮಾಧಾನವಾದರೂ, ಒಳಮನಸ್ಸಿನಲ್ಲಿ, ಸಧ್ಯ ಡ್ರಿಲ್ಲಿಂಗ್ ಮಾಡಲು ಇನ್ನೂ ತುಂಬಾ ಹೊತ್ತಾಗುತ್ತಲ್ಲಾ ಅನ್ನೊ ಸಮಾಧಾನವೂ ಆಯ್ತು.

ಹೋಗಿ ಕುರ್ಚಿಯಲ್ಲಿ ಕೂತೆ. ನನ್ನ ಪಕ್ಕದಲ್ಲಿ ಕೂತಿದ್ದವರು ಯಾರೂ ಅಂತಿರಾ ? ಅವರೇ ನನ್ನ ಸ್ನೇಹಿತೆ ಸರಲಾಬೇನ್. ಮಾತೃಭಾಷೆ ಗುಜರಾತಿಯಾ ದರೂ ಬಲು ನಿಷ್ಠೆಯಿಂದ ಕನ್ನಡ ಕಲಿಯಲು ಪ್ರಾರಂಭಿಸಿದ್ದರು. ಹಾಗಾಗಿ ನಾವುಗಳು ಭೇಟಿಯಾದಾಗಲೆಲ್ಲಾ ಆಕೆ ಬಂದ ಕನ್ನಡದಲ್ಲೇ ನನ್ನೊಂದಿಗೆ ಮಾತನಾಡುತಿದ್ದರು.

ಗಣೇಶನ ಹಬ್ಬದಮುಂದೆ ಮಾರ್ಕೆಟ್ಟಿನಲ್ಲಿ ಸಿಕ್ಕಾಗ, ಅದೂ ಇದೂ ಮಾತಾ ಡುತ್ತಾ "ಹಬ್ಬಕ್ಕೆ ಕಡುಬಿನ ಮಾಡುತ್ತಿರಲ್ಲವೇ ನೀವು?" ಎಂದರು ಸರಲಾ ಬೆನ್.

"ಹೌದು 'ಕಡಬು' ಮಾಡ್ತೀವಿ ಕಡುಬಿನ ಅನ್ನೋದು ತಪ್ಪು. ಅದು ಕಡಬು ಅಷ್ಟೆ ಸರಲಾಬೆನ್" ಎಂದೆ. "ಇಲಾ ರೀ, ಪುಸ್ತಕದಲ್ಲಿ ಗಣೇಶನಿಗೆ ಕಡುಬಿನ ನೈವೇದ್ಯ ಎಂದಿದೆ" ಎಂದರು!

ಹೀಗೆ ಹೊಸದಾಗಿ ಭಾಷೆಯನ್ನು ಕಲಿಯುತ್ತಿರುವವರ ಹತ್ತಿರ ಸಂಭಾಷಣೆ ಬಲು ಚೆನ್ನ.

"ಏನು, ಚೆನ್ನಾಗಿದ್ದಿರಾ" ಅಂತ ಮಾತು ಶುರುಮಾಡಿದೆ.

"ನಿಮ್‌ಗೆ ಒಳ್ಳೆಸಮಾಚಾರ ಇದೆ ಲೀಲಾಬೆನ್, ನಂ ಶೀಲಾಗೆ ಮದ್‌ವೆ ಫಿಕ್ಸ್ ಆಗಿದೆ" ಎಂದರು.

"ಹೌದಾ, ತುಂಬಾ ಸಂತೋಷ. ಹುಡುಗ ಯಾರು, ಏನ್ ಮಾಡ್ತಿದಾನೆ ಅಂದೆ

ಅವನೂ ಅವಳ್ ಹಾಗೆ'' ಎಂದರು ಶೀಲಾ ಅವರ ಬಟ್ಟೆ ಅಂಗಡಿಯಲ್ಲೇ ಕೆಲಸ ಮಾಡುತಿದ್ದಳು. ಹುಡುಗನೂ ಯಾವುದೊ ಅಂಗಡಿಯಲ್ಲೇ ಕೆಲಸದಲ್ಲಿರಬೇಕು ಎಂದುಕೊಂಡೆ.

"ಓ ಅವನೂ ಅಂಗಡಿ ಕೆಲಸದಲ್ಲೆ ಇದ್ದಾನೆಯೋ?" ಎಂದೆ

"ಇಲಾ,ಇಲಾ, ಅವ್‌ನೂ ಅವಳ್ ಹಾಗೇ'',

ಶೀಲಾ ತುಂಬಾ ಮಾತುಗಾರ್ತಿ, ನಮ್ಮ ಬಡಾವಣೆ ಯಲ್ಲಿರುವವರೆಲ್ಲಾ ಅವಳ ಸ್ನೇಹಿತರೆ. ಹುಡುಗನ ಗುಣವನ್ನು ಹೋಲಿಸುತ್ತಿದ್ದಾರೆಂದು ತಿಳಿಯಿತು.

"ಶೀಲಳ ಹಾಗೆ ತುಂಬಾ ಮಾತುಕತೆ ಬೇಕೂಂತ ಕಾಣುತ್ತೆ. ಅವಳ ಹಾಗೆ ತುಂಬಾ ಸೋಷಿಯಬಲ್ಲಾಗಿ ಇರಬೇಕು ಎಂದೆ

"ಇಲಾ ರೀ, ಅವ್‌ನೂ ಅವಳ್ ಹಾಗೇ'' ಪುನ: ಅದೇ ವಾಕ್ಯ ಪಠಣ.

ಅಯ್ಯೋ, ಶ್ರೀರಾಮ, ಇದೇನು ಅವಸ್ಥೆಯಪ್ಪಾ. ಅವನು ಅವಳ ಹಾಗೆ. ಅಂದರೆ ಅರ್ಥವೇನು. ಆಕೆಗೆ ಕನ್ನಡದಲ್ಲಿ ಸರಿಯಾಗಿ ಹೇಳಲು ಬರದೆ ಹೀಗೆ ಹೇಳಿದ್ದೆ ಹೇಳ್ತಾರೇನೋ ಅಂದುಕೊಂಡೆ.

ತಕ್ಷಣ ಹೊಳೀತು ಆಕೆಯ ಮಾತಿನ ಮರ್ಮ. ಶೀಲಾ ಒಳ್ಳೆ ಎತ್ತರವಾದ ಹುಡುಗಿ. ಸುಮಾರು ಐದೂವರೆ ಅಡಿ ಎತ್ತರ ಇರಬೇಕು. ಸರಿ, ಅವನೂ ಅವಳ ಹಾಗೆ ಎತ್ತರವಾಗಿರಬೇಕು. ಶೀಲಳಿಗೆ ತಕ್ಕ ಎತ್ತರವಾದ ಹುಡುಗ ಬೇಕೂಂತ ತುಂಬಾ ಹುಡುಕುತ್ತಿದ್ದರು. ಅದಕ್ಕೆ ಅವರು ಅದನ್ನೆ ಹೇಳುತ್ತಿರಬೇಕು ಎಂದು ಕೊಂಡೆ.

"ನೋಡದ್ರಾ ನೀವ್ ಹೇಳಿದ್ದು ನಂಗೆ ಬೇಗ್ ಗೊತ್ತಾಗಲೇ ಇಲ್ಲ. ಈಗ ಅರ್ಥವಾಯಿತು. ಅವನೂ ಅವಳ ಹಾಗೆ ಎತ್ತರವಾಗಿ ಚೆನ್ನಾಗಿರಬೇಕಲ್ಲವೇ'' ಎಂದೆ.

'' ಇಲ್ಲಾ, ಲೀಲಾಬೇನ್, ಅವ್‌ನೂ ಅವಳ್ ಹಾಗೆ ಬಿ.ಎ.'' ಎಂದರು.

ಶ್ರೀರಾಮ ರಕ್ಷೆ ! ಅಳಿಯ ಬಿ.ಎ. ಅಂತ ಹೇಳೊಕ್ಕೆ ಇಷ್ಟು ರಾಮಾಯಣವೇ ಇಷ್ಟೊಂದು ಸಸ್ಪೆನ್ಸ್ ಕಲ್ಪಿಸಿ ಕೊನೆಗೆ ಹೀಗೆ ಸಪ್ಪೆ ಎನ್‌ಡಿಂಗ್ ಕೊಟ್ಟಿದಕ್ಕೆ ರೇಗಿತು ನನಗೆ.

''ನಂ ಸುನೀಲ್‌ಗೆ ಸೀಟ್ ಸಿಕ್ಕಿತು, ಗೊತ್ತಾ ನಿಮ್‌ಗೆ'' ಎಂದರು.

ಅಷ್ಟರಲ್ಲಿ ಕ್ಯೂ ಕರಗಿತ್ತು. ಆಕೆಯ ಸರದಿಯೂ ಬಂತು. ಒಳಕ್ಕೆ ಹೋದರು ಸರಲಾ ಬೇನ್. ಈಕೆಯ ಮಾತಿನ ರೀತಿ ನೋಡಿದರೆ, ಸುನಿಲ್‌ಗೆ ಸೀಟ್ ಸಿಕ್ಕಿರುವುದು ಐ.ಐ.ಟಿ.ಯಲ್ಲೊ, ಅಥವಾ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲೊ ತಿಳಿಯದು.

No. 23 AL/84 -NT III

